ಸಂಪುಟ : 8 ಸಂಚಿಕೆ : 183 ಪುಟ : 4 ಬೆಲೆ : 3.00 ಗುರುವಾರ ಆಗಸ್ಟ್ 24, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ

Volume : 8 Issue : 183 Pages : 4 Price : 3.00 Thursday August 24, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25




## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಬೆಟಗೇರಿ ಅವಳಿ ನಗರದ ಸಾರ್ವಜನಿಕರಿಗೆ ತಿಳಿಸುವುದೆನೆಂದರೆ ಆಗಸ್ಟ್ 24 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು.

**ಸ್ಥಳಗಳ ವಿವರ**

ವಾರ್ಡ್ ನಂ. 22ರಲ್ಲಿ ಗಂಗಿಮಡಿ ದೊಡ್ಡಮಸೀದಿ ಲೈನ್, ಕನ್ನಡ ಶಾಲೆ ಲೈನ್, ಯಲ್ಲಮ್ಮನ ಗುಡಿ, ವಾರ್ಡ್ ನ.16ರಲ್ಲಿ ಹೊಂಬಳನಾಕಾ, ಜನತಾ ಕಾಲೋನಿ, ಮಸೀದಿ ಭಾಗ 1, 2, 3, 4, 5, 6, ಮಲ್ಲಮ್ಮನವರ ಲೈನ್, ಶೌಚಾಲಯ, ಹಿಂದಿನ ಭಾಗ, ಅಡ್ಡೇದ ಲೈನ್, ಭಟ್ಟರ ಲೈನ್, ವಾರ್ಡ್ ನಂ. 24, 25, 19ರಲ್ಲಿ ಕುರಬರ ಗರಡಿ ಲೈನ್, ಮಾಬೂಸುಬಾನಿಕಟ್ಟಿ ಲೈನ್, ಕೊಪ್ಪದವರ ಲೈನ್, ಖಾನತೋಟ ಭಾಗ-1 ಹಾಳದಿಬ್ಬ ಭಾಗ-1, 2, 3, ಅಬ್ಬಿಗೇರಿ, ಕರುಗಲ್ಲ ಓಣಿ, ಪುಣೇಕರ್ ಲೈನ್, ಕರಿದೇವರಗುಡಿ, ಜಿ.ಎಸ್.ಹಿರೇಮಠ, ಮದ್ಲಿ ಓಣಿ, ಜೀರ ಓಣಿ, ಗಣಪತಿ ಗುಡಿ, ಹನುಮನಗರಡಿ, ವಾರ್ಡ್ ನಂ.27 ರಲ್ಲಿ ಸ್ಟೇಡಿಯಂ, ಕುರಡಗಿ ದವಾಖಾನೆ, ಅಕ್ಕಿಯವರ ಲೈನ್, ಜಿ.ಎಸ್.ಪಾಟಿಲ ಲೈನ್, ನಾಗರಕಟ್ಟಿ ಲೈನ್, ತಂಬ್ರಳ್ಳಿಮಠ ಲೈನ್, ನಂದಿಕೇಶ್ವರ ಮಠದ ಹಿಂದಿನ ಭಾಗ ವಾರ್ಡ್ ನಂ. 34, 35ರಲ್ಲಿ ರೇಣಕ್ಕನ ಲೈನ್, 1ನೇ ಕ್ರಾಸ್, 2ನೇ ಕ್ರಾಸ್, 3ನೇ ಕ್ರಾಸ್, ಉರ್ದು ಶಾಲೆ ಲೈನ್, ಕನ್ನಡ ಶಾಲೆ, ಅಟೋಸ್ಟ್ಯಾಂಡ್, ಕೊನೆಯ ಕ್ರಾಸ್, ವಾರ್ಡ್ ನಂ. 11ರಲ್ಲಿ ನಿಸರ್ಗ ಬಡಾವಣೆ, ರಿಂಗ್ ರಸ್ತೆ, ಅಬ್ದುಲ್ ಕಲಾಮ್ ಶಿವಬಸವನಗರ,

ವಾರ್ಡ್ ನಂ. 27ರಲ್ಲಿ ಸ್ಟೇಡಿಯಂ ಮೇರವಾಡೆ ಮಾಸ್ತರ್ ಲೈನ್, ವಕೀಲರ ಲೈನ್, ಹುಬ್ಬಳ್ಳಿಮಠದ ಲೈನ್, ಗರಗದ ಲೈನ್, ಮಾಲಿಗೌಡ್ರ ಲೈನ್.

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಗದಗ ನಗರದಲ್ಲಿ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ ಹೇಳಿಕೆ

# ನೆಲ-ಜಲ-ಭಾಷೆಯ ವಿಚಾರದಲ್ಲಿ ರಾಜಕೀಯ ಬೇಡ



■ವಿಜಯಸಾಕ್ಷಿ ಸುದ್ದಿ, ಗದಗ

ಕರ್ನಾಟಕದಲ್ಲಿ ಈ ಸಲದ ಮುಂಗಾರಿನಲ್ಲಿ ಮಳೆಯ ಕೊರತೆಯಾಗಿದೆ. ರಾಜ್ಯಕ್ಕೇ ನೀರಿನ ಅಭಾವ ಉಂಟಾಗಿದೆ. ಮಂಡ್ಯದ ರೈತರು ಸಂಕಷ್ಟದಲ್ಲಿದ್ದಾರೆ. ಕುಡಿಯುವ ನೀರಿಗೂ ಹಾಹಾಕರವಿದೆ. ನಿರೀಕ್ಷೆಯಂತೆ ಮಳೆಯಾದಾಗ ನೆರೆಯ ತಮಿಳುನಾಡಿಗೆ 170 ಟಿಎಂಸಿ ನೀರು ಕೊಡಬೇಕು. ಕೊಟ್ಟಿದ್ದೇವೆ, ಕೊಡುತ್ತೇವೆ ಕೂಡ. ಆದರೆ, ಸದ್ಯಕ್ಕೆ ಅಂತಹ ಪರಿಸ್ಥಿತಿಯಿಲ್ಲ. ಹೀಗಿರುವಾಗ, 10 ಸಾವಿರ ಕ್ಯೂಸೆಕ್ ನೀರನ್ನು ತಮಿಳುನಾಡಿಗೆ ಹರಿಸುವಂತೆ ಸಿಡಬ್ಲೂಸಿ ಆದೇಶ ಹೊರಡಿಸಿದೆ. ಆದರೆ, ತಮಿಳುನಾಡು ಸರ್ಕಾರ 26 ಸಾವಿರ ಕ್ಯೂಸೆಕ್ ನೀರು ಬಿಡಬೇಕು ಎಂದು ಮನವಿ ಮಾಡಿದ್ದಾರೆ. 10 ಸಾವಿರ ಕ್ಯೂಸೆಕ್ ನೀರು ಹರಿಸುವುದಕ್ಕೇ ಸಂಕಷ್ಟದ ಪರಿಸ್ಥಿತಿಯಿರುವುದರಿಂದ ನಾವು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದೇವೆ ಎಂದು ಕರ್ನಾಟಕದ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ ಪಾಟೀಲ ಹೇಳಿದರು.

ಬುಧವಾರ ಗದಗ ನಗರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಸಚಿವರು ಮಾತನಾಡುತ್ತಿದ್ದರು.

ಕಾವೇರಿ ನೀರು ಹಂಚಿಕೆಯ ವಿಷಯವಾಗಿ ಪ್ರತಿಕ್ರಿಯಿಸಿದ ಅವರು, ಬಿಜೆಪಿಯವರು ಈಗಾಗಲೇ ಸೋತು ಸುಣ್ಣವಾಗಿದ್ದಾರೆ. ಅವರಿಗೆ ವಿರೋಧ ಪಕ್ಷದ ನಾಯಕನನ್ನು ನೇಮಕ ಮಾಡಲು ಸಾಧ್ಯವಾಗಿಲ್ಲ. ವಿರೋಧ ಪಕ್ಷದ ನಾಯಕರೇ ಇಲ್ಲದೆ ಅಧಿವೇಶನವಾಗಿದೆ. ಬಿಜೆಪಿಯಲ್ಲಿ ಬಹಳಷ್ಟು ಮುಖಂಡರು ಹತಾಶರಾಗಿ ಪಕ್ಷವನ್ನು ತೊರೆಯುವ ಹಂತದಲ್ಲಿದ್ದಾರೆ. ಹೀಗಾಗಿ, ಕಾವೇರಿ ವಿಚಾರದಲ್ಲಿ ರಾಜಕೀಯ ಮಾಡಲು ಬಯಸಿ, ಭಾವನಾತ್ಮಕ ಸಂಬಂಧಗಳು ಕೆರಳಿಸುವ ಕೆಲಸ ಮಾಡುತ್ತಿದ್ದಾರೆ. ಆದರೆ, ನೆಲ-ಜಲ-ಭಾಷೆಯ ವಿಚಾರದಲ್ಲಿ ರಾಜಕೀಯ ಮಾಡಬಾರದು.

ಭಾವನಾತ್ಮಕ ವಿಷಯಗಳನ್ನು ಎತ್ತುವುದೇ ಬಿಜೆಪಿವರ ಕೆಲಸ. ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ ಎಂದು ಬಿಜೆಪಿ ▸▸3ನೇ ಪುಟಕ್ಕೆ

> ಕುಮಾರಸ್ವಾಮಿಯವರ ಪರಿಸ್ಥಿತಿಯೂ ಸಿ.ಟಿ ರವಿ ಅವರ ಹಾಗೆಯೇ ಆಗಿದೆ. ಜೆಡಿಎಸ್ ಬೆಂಬಲವಿಲ್ಲದೆ ಯಾರೂ ಸರ್ಕಾರ ರಚಿಸಲು ಸಾಧ್ಯವಿಲ್ಲ ಎಂಬ ಭಾವನೆ ಅವರಲ್ಲಿತ್ತು. ಆದರೆ, ಅದು ಸಾಧ್ಯವಾಗದೇ ಇರುವುದರಿಂದ ಸ್ವಾಭಾವಿಕವಾಗಿ ಅವರಿಗೆ ನೋವಾಗಿದೆ. ನಮ್ಮ ಬೆಂಬಲದಿಂದಲೇ ಸರ್ಕಾರ ರಚನೆಯಾಗಬೇಕು ಎನ್ನುವ ಅವರ ಅಪೇಕ್ಷೆ ತಪ್ಪಲ್ಲ. ಆದರೆ, ಜನಾದೇಶವೇ ಬೇರೆಯಿತ್ತು. ಏನು ಮಾಡೋಕಾಗುತ್ತೆ...
>
> – ಎಂ ಬಿ ಪಾಟೀಲ್.
> ಸಚಿವರು.

ಕರ್ನಾಟಕದ ಕಾಂಗ್ರೆಸ್ ಸರ್ಕಾರ ತಮಿಳುನಾಡಿನ ಡಿಎಂಕೆಯೊಂದಿಗಿನ ಸ್ನೇಹಕ್ಕೋಸ್ಕರ ಕಾವೇರಿ ನೀರನ್ನು ಹರಿಸುತ್ತಿದೆ ಎಂಬ ವಿರೋಧ ಪಕ್ಷಗಳ ಆರೋಪದಲ್ಲಿ ಹುರುಳಿಲ್ಲ. ವಿರೋಧ ಪಕ್ಷಗಳು ಅಧಿಕಾರದಲ್ಲಿದ್ದಾಗಲೂ ತಮಿಳುನಾಡಿಗೆ ಸಿಡಬ್ಲ್ಯೂಸಿ ಆದೇಶದ ಮೇರೆಗೆ ನೀರು ಹರಿಸಿವೆ. ನಾವಾಗಿಯೇ ಡಿಎಂಕೆ ಪಕ್ಷದ ಖುಷಿಗಾಗಿ ನೀರು ಹರಿಸಿಲ್ಲ. ಕೇಂದ್ರ ಸರಕಾರದ ಅಧೀನದಲ್ಲಿರುವ ಸಿಡಬ್ಲ್ಯೂಸಿ ಸಂಸ್ಥೆಯೇ ಈ ಆದೇಶ ಹೊರಡಿಸಿದೆ. ಹಾಗಾದರೆ, ಕೇಂದ್ರ ಸರಕಾರವನ್ನು ದೂಷಿಸಲು ಸಾಧ್ಯವಿದೆಯಾ ಎಂದು ಪ್ರಶ್ನಿಸಿದ ಸಚಿವರು, ಸುಪ್ರೀಂ ಕೋರ್ಟ್‌ನಲ್ಲಿ ಸಮರ್ಥವಾಗಿ ಹೋರಾಟ ನಡೆಸಿ, ನ್ಯಾಯಯುತವಾದ ಪರಿಹಾರ ಕಂಡುಕೊಳ್ಳುತ್ತೇವೆ ಎಂದರು.

## ಸೌಜನ್ಯ ಕುಟುಂಬಕ್ಕೆ ನ್ಯಾಯ ಸಿಗಲು ಆ.26ರಂದು ಪಾದಯಾತ್ರೆ

■ವಿಜಯಸಾಕ್ಷಿ ಸುದ್ದಿ, ಗದಗ

ಸೌಜನ್ಯ ಮತ್ತು ಆಕೆಯ ಕುಟುಂಬದ ಸದಸ್ಯರಿಗೆ ನ್ಯಾಯ ಸಿಗಬೇಕು ಎಂದು ಒತ್ತಾಯಿಸಿ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ, ಬೆಳ್ತಂಗಡಿಯಿಂದ ಬೆಂಗಳೂರು ವರೆಗೆ ಪಾದಯಾತ್ರೆ ಹಮ್ಮಿಕೊಂಡಿದೆ ಎಂದು ಕೆಆರ್‌ಎಸ್ ಪಕ್ಷದ ಜಿಲ್ಲಾಧ್ಯಕ್ಷ ಜೋಸೆಫ್ ಉಧೋಜಿ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ರಾಜ್ಯಾಧ್ಯಕ್ಷ ರವಿ ಕೃಷ್ಣಾರೆಡ್ಡಿ ನೇತೃತ್ವದಲ್ಲಿ ಆಗಸ್ಟ್ 26ರಂದು ಬೆಳ್ತಂಗಡಿಯಿಂದ ಪಾದಯಾತ್ರೆ ಆರಂಭವಾಗಿ ಸಪ್ಟೆಂಬರ್ 7ರಂದು ಬೆಂಗಳೂರಿಗೆ ತಲುಪಲಿದೆ. ಸಪ್ಟೆಂಬರ್ 8ರಂದು ವಿಧಾನಸೌಧಕ್ಕೆ ತೆರಳಿ ಸರಕಾರಕ್ಕೆ ಮನವಿ ಸಲ್ಲಿಸಲಾಗುವುದು ಎಂದರು.

ಸೌಜನ್ಯ ಪ್ರಕರಣದಲ್ಲಿ ಈವರೆಗೆ ಯಾರಿಗೂ ಶಿಕ್ಷೆಯಾಗಿಲ್ಲ. ಪೊಲೀಸರ ತನಿಖಾ ರೀತಿಯ ಕುರಿತು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದ್ದಾರೆ. ವ್ಯವಸ್ಥೆಯ ಬಗ್ಗೆ ಜನ ಭ್ರಮನಿರಸನಗೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಸೌಜನ್ಯ ಮತ್ತು ಆಕೆಯ ಕುಟುಂಬಕ್ಕೆ ಆಗಿರುವ ಅನ್ಯಾಯಕ್ಕೆ ಈಗಲಾದರೂ ನ್ಯಾಯ ಸಿಗಬೇಕು. ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸುವದನ್ನ ತಪ್ಪಿಸಲು ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕೆಆರ್‌ಎಸ್ ಪಕ್ಷ ಈ ಪಾದಯಾತ್ರೆ ಹಮ್ಮಿಕೊಂಡಿದೆ ಎಂದರು. ಪಾದಯಾತ್ರೆಯ ಮೂಲಕ ಸೌಜನ್ಯ ಹತ್ತೆಯ ಪ್ರಕರಣವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ತಕ್ಷಣವೇ ಮರುತನಿಗೆ ನಡೆಸಲು ಒತ್ತಾಯಿಸಲಾಗುವುದು. ರಾಜ್ಯದಲ್ಲಿ ಮಕ್ಕಳ ಮತ್ತು ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರ ಮತ್ತು ಕೊಲೆ ಪ್ರಕರಣಗಳ ಶೀಘ್ರ ವಿಲೇವಾರಿಗೆ ಶೀಘ್ರ ವಿಶೇಷ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಬೇಕು. ಸೌಜನ್ಯ ಮಹಿಳಾ ಸುರಕ್ಷಾ ಆಯೋಗ ಸ್ಥಾಪನೆ ಮಾಡಬೇಕು ಎನ್ನುವ ಹಲವಾರು ಬೇಡಿಕೆ ಈಡೇರಿಕೆಗಾಗಿ ಒತ್ತಾಯಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಕೆಆರ್ ಎಸ್ ಪಕ್ಷದ ಪದಾಧಿಕಾರಿಗಳಾದ ಸುಮಲತಾ ಶಿಲ್ಪಿ, ರಾಜೇಸಾಬ ಕಾಗದಗಾರ, ಪ್ರಶಾಂತ ಹಗೆದಾಳ, ಅಮಿನ್ ರೈ, ಉಷಾ ಕೊಪ್ಪಳ, ಶೋಭಾಂಗಿನಿ ಪಾಟೀಲ ಉಪಸ್ಥಿತರಿದ್ದರು.

## ಭಾರತೀಯ ಸಂಸ್ಕೃತಿ ಉಳಿಸಲು ವಿದ್ಯಾರ್ಥಿಗಳಿಗೆ ಪತ್ರ ಬರೆಯುವ ಸ್ಪರ್ಧೆ

■ವಿಜಯಸಾಕ್ಷಿ ಸುದ್ದಿ, ಗದಗ

ಡಿಜಿಟಲ್ ಯುಗದಲ್ಲೂ ಮಕ್ಕಳಲ್ಲಿ ಭಾರತೀಯ ಸಂಸ್ಕೃತಿಯನ್ನು ಬೆಳೆಸುವ ಉದ್ದೇಶದಿಂದ ಪತ್ರ ಬರೆಯುವ ಸ್ಪರ್ಧೆ ಜೊತೆಗೆ ನನ್ನ ವಿಶೇಷ ಶಿಕ್ಷಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವಿಜಯ ಲಲಿತಕಲಾ ಸಂಸ್ಥೆಯ ಸಂತೋಷ ಅಕ್ಕಿ ಹೇಳಿದರು.



ನಗರದ ಪತ್ರಿಕಾ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಯ ಜೀವನದಲ್ಲಿ ಶಿಕ್ಷಕನ ಪಾತ್ರ ಎಷ್ಟಿರುತ್ತದೆ ಎನ್ನುವ ಕುರಿತು ನನ್ನ ವಿಶೇಷ ಶಿಕ್ಷಕ ಪ್ರಶಸ್ತಿ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಪೂರ್ವ ಪ್ರಾಥಮಿಕದಿಂದ ಸ್ನಾತಕೋತ್ತರ ಪದವಿಯವರೆಗೆ ಪತ್ರ ಬರೆಯುವ ಸ್ಪರ್ಧೆ ನಡೆಯಲಿದೆ ಎಂದರು.

ಒಟ್ಟು ಆರು ವಿಭಾಗದಲ್ಲಿ ಪತ್ರ ಬರೆಯುವ ಸ್ಪರ್ಧೆ ನಡೆಯಲಿದ್ದು, ಪ್ರತಿ ವಿಭಾಗದಲ್ಲಿ ಒಬ್ಬ ವಿದ್ಯಾರ್ಥಿ ಮತ್ತು ಶಿಕ್ಷಕರೊಬ್ಬರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪೂರ್ವ ಪ್ರಾಥಮಿಕ ವಿಭಾಗದಲ್ಲಿ ಪಾಲಕರು ತಮ್ಮ ಮಕ್ಕಳ ಪರವಾಗಿ ಮತ್ತು ಪ್ರಾಥಮಿಕ ವಿಭಾಗದಲ್ಲಿ ಪಾಲಕರ ಸಹಾಯದೊಂದಿಗೆ ಮಕ್ಕಳು ನನ್ನ ಮಗುವಿಗೆ ಉತ್ತಮ ಬುನಾದಿ ಶಿಕ್ಷಣ ನೀಡಿದ ಶಿಕ್ಷಕ ವಿಷಯವಾಗಿ ಪತ್ರ ಬರೆಯಬೇಕು ಎಂದು ತಿಳಿಸಿದರು.

ಇನ್ನು ಪ್ರೌಢಶಿಕ್ಷಣ ವಿಭಾಗದಲ್ಲಿ ನನಗೆ ವಿಶೇಷ ಶಿಕ್ಷಣ ನೀಡಿದ ನನ್ನ ನೆಚ್ಚಿನ ಶಿಕ್ಷಕ, ಪಿಯು ವಿಭಾಗದಲ್ಲಿ ನನ್ನ ಜೀವನದ ವ್ಯಕ್ತಿತ್ವ ವಿಕಸನಕ್ಕೆ ಹಾಗೂ ನನ್ನ ಗುರಿ ಸಾಧನೆಗೆ ವಿಶೇಷ ಮಾರ್ಗದರ್ಶನ ಮಾಡಿದ ಶಿಕ್ಷಕ, ಪದವಿ ವಿಭಾಗದಲ್ಲಿ ನನ್ನ ಭವಿಷ್ಯ ರೂಪಿಸುವಲ್ಲಿ ಹಾಗೂ ನನಗೆ ಮಾರ್ಗದರ್ಶನ ಮಾಡಿದ ಶಿಕ್ಷಕ ಹಾಗೂ ಸ್ನಾತಕೋತ್ತರ ಶಿಕ್ಷಣ ವಿಭಾಗದಲ್ಲಿ ನನ್ನ ಭವಿಷ್ಯ ರೂಪಿಸುವಲ್ಲಿ ಹಾಗೂ ಮಾರ್ಗದರ್ಶನ ಮಾಡಿದ ನನ್ನ ನೆಚ್ಚಿನ ಶಿಕ್ಷಕ ಕುರಿತು ಪತ್ರ ಸ್ಪರ್ಧೆ ಏರ್ಪಡಿಸಲಾಗಿದೆ.

ಸೆ. 2ರ ಒಳಗಾಗಿ ಪತ್ರಗಳು ಆಯಾ ವಿಭಾಗದ ಮುಖ್ಯ ಶಿಕ್ಷಕರ ಹೆಸರಿನಲ್ಲಿ ವಿಜಯ ಲಲಿತಕಲಾ ಸಂಸ್ಥೆ, ರಾಜೀವಗಾಂಧಿ ನಗರ, ಟಿ.ಪಿ. ಅಕ್ಕಿ ರಸ್ತೆ, ಸಾಯಿಬಾಬಾ ಗುಡಿ ಹಿಂಭಾಗ, ಗದಗ. ಈ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂ. 8296249683, 8970754485 ಸಂಪರ್ಕಿಸಬಹುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಸಿ.ವಿ. ಬಡಿಗೇರ, ಎಸ್.ವಿ. ಗುಂಜಾಳ, ಗಣೇಶ ಚಲವಾದಿ, ಎಂ.ಎಸ್. ಜಲ್ಲಿ, ರೇಷ್ಮಾ, ಶೃತಿ ಪಾಟೀಲ ಉಪಸ್ಥಿತರಿದ್ದರು.

## ನರಗುಂದ ತಾಲೂಕಿನ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ಪರಿಷ್ಕರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ನರಗುಂದ ತಾಲೂಕಿನ ಸ್ಥಿರಾಸ್ತಿಗಳ ಬೆಲೆಯನ್ನು 2023-24ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ , ಪ್ರಕಟಿಸುವ ಮತ್ತು ಪರಿಷ್ಕರಿಸುವ ನಿಯಮಗಳ ಪ್ರಕಾರ 2023-24ನೇ ಸಾಲಿಗೆ ಪರಿಷ್ಕರಿಸಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಕರಡು ಪ್ರತಿಯನ್ನು ಉಪನೋಂದಣಾಧಿಕಾರಿಗಳ ಕಚೇರಿ ನರಗುಂದ ಸೂಚನಾ ಫಲಕದಲ್ಲಿ ಸಾರ್ವಜನಿಕ ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳಿಗಾಗಿ ಪ್ರಕಟಿಸಲಾಗಿದೆ. ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳು ಇದ್ದಲ್ಲಿ ಸಂಬಂಧಪಟ್ಟವರು ಸೂಕ್ತ ದಾಖಲೆಗಳೊಂದಿಗೆ ಸೆಪ್ಟೆಂಬರ್ 3 ರೊಳಗಾಗಿ ನರಗುಂದ ಉಪನೊಂದಣಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ.

## ಶಿರಹಟ್ಟಿ ತಾಲೂಕಿನ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ಪರಿಷ್ಕರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಶಿರಹಟ್ಟಿ ತಾಲೂಕಿನ ಸ್ಥಿರಾಸ್ತಿ ಬೆಲೆಗಳನ್ನು 2023-24ನೇ ಸಾಲಿಗೆ ಸಂಬಂಧಿಸಿದಂತೆ ಕರ್ನಾಟಕ ಮುದ್ರಾಂಕ ಕಾಯ್ದೆಯ ಮಾರುಕಟ್ಟೆ ದರಗಳನ್ನು ಅಂದಾಜು ಮಾಡುವ ಮತ್ತು ಪರಿಷ್ಕರಿಸುವ ನಿಯಮಗಳ ಪ್ರಕಾರ 2023-24ನೇ ಸಾಲಿಗೆ ಪರಿಷ್ಕರಿಸುವ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ.

ಕರಡು ಪ್ರತಿಯನ್ನು ನೋಂದಣಿ ಅಧಿಕಾರಿಗಳ ಕಚೇರಿ, ಶಿರಹಟ್ಟಿ ಸೂಚನಾ ಫಲಕದಲ್ಲಿ ಸಾರ್ವಜನಿಕ ಸಲಹೆ ಸೂಚನೆ ಮತ್ತು ಆಕ್ಷೇಪಣೆಗಳಿಗಾಗಿ ಪ್ರಕಟಿಸಲಾಗಿದೆ.

ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಂಬಂಧಪಟ್ಟವರು ಸೂಕ್ತ ದಾಖಲೆಗಳೊಂದಿಗೆ ಸೆಪ್ಟೆಂಬರ್ 5 ರೊಳಗಾಗಿ ಶಿರಹಟ್ಟಿ ಉಪನೋಂದಣಾಧಿಕಾರಿಗಳಿಗೆ ಲಿಖಿತ ರೂಪದಲ್ಲಿ ಸಲ್ಲಿಸಬಹುದಾಗಿದೆ.

## ಗಜೇಂದ್ರಗಡ ತಾಲೂಕಿನ ಸ್ಥಿರಾಸ್ತಿಗಳ ಮಾರ್ಗಸೂಚಿ ಬೆಲೆ ಪರಿಷ್ಕರಣೆ: ಆಕ್ಷೇಪಣೆ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

ಗಜೇಂದ್ರಗಡ ತಾಲೂಕಿನ ಸ್ಥಿರಾಸ್ತಿಗಳ ಬೆಲೆಯನ್ನು 2023-24ನೇ ಸಾಲಿಗೆ ಸಂಬಂಧಿಸಿದಂತೆ ಪರಿಷ್ಕರಿಸಿ ಕರಡು ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಕರಡು ಪ್ರತಿಯನ್ನು ಉಪನೋಂದಣಾದಿಕಾರಿಗಳು ಗಜೇಂದ್ರಗಡ ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಸಲಹೆ, ಸೂಚನೆ ಮತ್ತು ಆಕ್ಷೇಪಣೆಗಳು ಇದ್ದಲ್ಲಿ ಪ್ರಕಟಣೆಯ ದಿನಾಂಕದಿಂದ 15 ದಿವಸದೊಳಗಾಗಿ ಸಂಬಂಧಪಟ್ಟವರು ಗಜೇಂದ್ರಗಡ ಉಪನೋಂದಣಾಧಿಕಾರಿಗಳ ಕಚೇರಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಉಪ ನೋಂದಣಿ ಅಧಿಕಾರಿಗಳ ಕಚೇರಿ ಗಜೇಂದ್ರಗಡ ಇಲ್ಲಿ ಸಂಪರ್ಕಿಸಬಹುದಾಗಿದೆ.

## ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಆ.31ರಂದು

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಹಯೋಗದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿಯನ್ನು ಆಗಸ್ಟ್ 31 ರಂದು ಸಂಜೆ 4 ಗಂಟೆಗೆ ನಗರದ ಜಿಲ್ಲಾಡಳಿತ ಭವನದ ಆಡಿಟೋರಿಯಂ ಹಾಲ್‌ನಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ ಮುದುಕಮ್ಮನವರ ತಿಳಿಸಿದರು.



ಬುಧವಾರದಂದು ಜಿಲ್ಲಾಡಳಿತ ಭವನದ ಕಾನ್ಫರೆನ್ಸ್ ಹಾಲ್‌ನಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿ ಕುರಿತು ಪೂರ್ವಭಾವಿ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಅವರು ಮಾತನಾಡಿದರು.

ತಾಲೂಕು ಮಟ್ಟದಲ್ಲಿಯೂ ಸಹ ಬ್ರಹ್ಮಶ್ರೀ ನಾರಾಯಣ ಗುರು ಜಯಂತಿಯನ್ನು ಆಚರಿಸಲು ಕ್ರಮ ವಹಿಸಬೇಕೆಂದರು.

ಸಭೆಯಲ್ಲಿ ಶಿಷ್ಟಾಚಾರದನ್ವಯ ಕಾರ್ಯಕ್ರಮದ ಆಮಂತ್ರಣ ಪತ್ರಿಕೆ ಮುದ್ರಣ ಮಾಡಿ ಹಂಚಿಕೆ ಮಾಡಬೇಕು ಹಾಗೂ ಅತಿಥಿಗಳನ್ನು ಜಯಂತಿ ಆಚರಣೆಗೆ ಆಹ್ವಾನಿಸಬೇಕು. ಬ್ರಹ್ಮಶ್ರೀ ನಾರಾಯಣ ಗುರುಗಳ ಕುರಿತು ಆಳ ಜ್ಞಾನ ಹೊಂದಿದವರನ್ನು ಗುರುತಿಸಿ ಅವರಿಂದ ಉಪನ್ಯಾಸ ಕೊಡಿಸಬೇಕು. ಆಗಮಿಸಿದ ಎಲ್ಲರಿಗೂ ಜಯಂತಿಯಂದು ಬ್ರಹ್ಮಶ್ರೀ ನಾರಾಯಣ ಗುರುಗಳ ಬಗ್ಗೆ ತಿಳಿಸಿಕೊಡಬೇಕು ಎಂದು ಹೇಳಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ. ಬಿ. ಸರ್ವರಿಗೂ ಸ್ವಾಗತಿಸಿದರು.

ಸಭೆಯಲ್ಲಿ ಈಳಿಗೇರ ಸಮಾಜದ ಜಿಲ್ಲಾ ಅಧ್ಯಕ್ಷ ಪ್ರಕಾಶ ಬೊಮನಹಳ್ಳಿ, ಪ್ರಧಾನ ಕಾರ್ಯದರ್ಶಿ ರವಿಕುಮಾರ ಹೊಸಪೇಟೆ, ಫಕ್ಕೀರೇಶ ಮಾಗಡಿ, ಮಾರುತಿ ಈಳಿಗೇರ, ಶರಣಪ್ಪ ಈಳಿಗೇರ, ಯಮನೂರಪ್ಪ ಈಳಿಗೇರ, ಉದಯಕುಮಾರ ಈಳಿಗೇರ, ರಾಜಾರಾಮ ಶಿಂಧೆ, ಕುಮಾರ ಈಳಿಗೇರ, ರವಿ ಈಳಿಗೇರ, ಅಶೋಕ ಈಳಿಗೇರ ಸೇರಿದಂತೆ ಸಮಾಜದ ಗಣ್ಯರು, ಹಿರಿಯರು ಪಾಲ್ಗೊಂಡಿದ್ದರು.



ಸಚಿವ ಎಂ.ಬಿ ಪಾಟೀಲರು ಬುಧವಾರ ಗದಗ ಶಹರಕ್ಕೆ ಭೇಟಿ ನೀಡಿ ಮುಂಡರಗಿ ಪಟ್ಟಣಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ, ಹೈತಾಪುರ ಬಳಿ ದ್ವಿಚಕ್ರ ವಾಹನದಿಂದ ಆಯತಪ್ಪಿ ಬಿದ್ದು ಗಾಯಗೊಂಡಿದ್ದ ವ್ಯಕ್ತಿಯೊಬ್ಬರನ್ನು ಗಮನಿಸಿ, ಅಲ್ಲಿಯೇ ತಮ್ಮ ವಾಹನವನ್ನು ನಿಲ್ಲಿಸಿ, ವಿಚಾರಿಸಿದರು. ರಸ್ತೆ ಮಧ್ಯೆ ಬಿದ್ದಿದ್ದ ಬೈಕ್ ಸವಾರನನ್ನು ತಮ್ಮ ಸಹಾಯಕರ ನೆರವಿನೊಂದಿಗೆ ಆಸ್ಪತ್ರೆಗೆ ಸಾಗಿಸಿ ಮಾನವೀಯತೆ ತೋರಿದರು. ಅಲ್ಲದೆ, ಗಾಯಾಳುವಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ವೈದ್ಯರಿಗೆ ಸೂಚನೆ ನೀಡಿದರು.

### ಅಟಲ್ ಭೂಜಲ ಯೋಜನೆ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರ

# ಬಳಕೆಗಿಂತ ಹೆಚ್ಚಿನ ನೀರನ್ನು ಇಂಗಿಸಿ

■ವಿಜಯಸಾಕ್ಷಿ ಸುದ್ದಿ, ಗದಗ

ಅಂತರ್ಜಲ ಸದ್ಬಳಕೆಯೊಂದಿಗೆ ಪ್ರಕೃತಿ ನಮಗಾಗಿ ಭೂಗರ್ಭದಲ್ಲಿ ಭದ್ರವಾಗಿ ಕೂಡಿಟ್ಟಿರುವ ಈ ಜೀವಜಲವನ್ನು ಹಿತಮಿತವಾಗಿ ಬಳಸಿದರೆ ಮಾತ್ರ ಭವಿಷ್ಯದ ಪೀಳಿಗೆಗೂ ಉಳಿಸಬಹುದು. ಅದಕ್ಕಾಗಿ ಕೊಳವೆಬಾವಿ ಸೇರಿದಂತೆ ಅಂತರ್ಜಲ ಬಳಸಿಕೊಂಡು ನೀರಾವರಿ ಆಧಾರಿತ ಕೃಷಿ ಮಾಡುವವರು ಸೂಕ್ಷ್ಮ ನೀರಾವರಿ ಪದ್ಧತಿಗಳಾದ ತುಂತುರು ಮತ್ತು ಹನಿ ನೀರಾವರಿ ಅಳವಡಿಸಿಕೊಳ್ಳುವುದು ಅವಶ್ಯಕ. ಬಳಕೆ ಮಾಡುವುದಕ್ಕಿಂತ ಹೆಚ್ಚಿನ



ಪ್ರಮಾಣದ ನೀರನ್ನು ಭೂಮಿಗೆ ಮರುಪೂರಣ ಮಾಡಬೇಕಾಗಿರುವುದು ಅತೀ ಅವಶ್ಯಕವಾಗಿದೆ ಎಂದು ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಸಿ.ಆರ್ ಮುಂಡರಗಿ ಅಭಿಪ್ರಾಯಪಟ್ಟರು.

ಅಟಲ್ ಭೂಜಲ ಯೋಜನೆಯ ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕದ ವತಿಯಿಂದ ಕೇಂದ್ರ ಸರ್ಕಾರ ಹಾಗೂ ವಿಶ್ವ ಬ್ಯಾಂಕಿನ ನೆರವಿನ ಪಾಲುದಾರಿಕೆಯಲ್ಲಿ ಜಿಲ್ಲೆಯಲ್ಲಿ ಅಟಲ್ ಭೂಜಲ್ ಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸೋಮವಾರದಂದು ಜಿಲ್ಲಾ ಪಂಚಾಯತ್ ▸▸3ನೇ ಪುಟಕ್ಕೆ

ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಜಿ.ಎಚ್ ಅಟಲ್ ಭೂಜಲ ಯೋಜನೆಯ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು. ಕೃಷಿ ಇಲಾಖೆಯ ಉಪ ನಿರ್ದೇಶಕರಾದ ಕರಿಯಲ್ಲಪ್ಪ ಡಿ.ಕೆ, ಅಟಲ್ ಭೂಜಲ ಯೋಜನೆ ಬೆಂಗಳೂರು ಪರಿಸರ ತಜ್ಞರಾದ ಕಿರಣ್ ಕಾಶಿನಾಥ ಕೇರಿ ಇವರು ಸೂಕ್ಷ್ಮ ನೀರಾವರಿ ಪದ್ಧತಿಗಳಾದ ತುಂತುರು ಮತ್ತು ಹನಿ ನೀರಾವರಿ ಅಳವಡಿಸಿಕೊಳ್ಳುವುದು ಅತೀ ಅವಶ್ಯಕ ಎಂದು ತಿಳಿಸಿದರು. ಅಟಲ್ ಭೂಜಲ ಯೋಜನೆ, ಜಿಲ್ಲಾ ನೋಡಲ್ ಅಧಿಕಾರಿ ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯ ನಾಗಶೆಟ್ಟಿ ಚಂದ್ರುಶೇಖರ್ ಅಟಲ್ ಭೂಜಲ ಯೋಜನೆಯ ಬಗ್ಗೆ ಕಿರು ಮಾಹಿತಿಯನ್ನು ನೀಡಿದರು.

## ಸಾಕ್ಷಿ ಸುಭಾಷಿತ

**ದೇಹ, ಮನಸ್ಸು, ಬುದ್ಧಿಯನ್ನು ಬಲಹೀನಗೊಳಿಸುವ ಎಲ್ಲವನ್ನೂ ವಿಷವೆಂದು ತಿಳಿದು ದೂರಮಾಡಿ**

**–ಸ್ವಾಮಿ ವಿವೇಕಾನಂದ**

## ಸಂಪಾದಕೀಯ

# ಬಾಹ್ಯಾಕಾಶ ಕ್ಷೇತ್ರದಲ್ಲಿ ಇಸ್ರೋ ಮೈಲುಗಲ್ಲು

ಬಾಹ್ಯಾಕಾಶ ಕ್ಷೇತ್ರದಲ್ಲಿ ಜಗತ್ತಿನ ಗಮನ ಸೆಳೆದ ಚಂದ್ರಯಾನ–3 ಯಶಸ್ವಿಯಾಗಿದೆ. ಅತ್ಯಂತ ಸುರಕ್ಷಿತ ಮತ್ತು ಕರಾರುವಕ್ಕಾಗಿ ಚಂದ್ರನ ಮೇಲೆ ಇಸ್ರೋ ವಿಕ್ರಮ ಸಾಧಿಸಿದೆ. ಇಡೀ ಜಗತ್ತಿನ ಜನ ಚಂದ್ರಯಾನದ ನೇರ ಪ್ರಸಾರವನ್ನು ವೀಕ್ಷಿಸಿ, ವಿಜ್ಞಾನಿಗಳ ಸಾಧನೆಯನ್ನು ಕೊಂಡಾಡಿದ್ದಾರೆ. ಭಾರತೀಯರ ಪಾಲಿಗೆ ಚಂದ್ರಯಾನ ಶ್ರಾವಣ ಮಾಸದ ಮತ್ತೊಂದು ಹಬ್ಬದಂತೆ ಆಚರಣೆಗೊಂಡಿದೆ.

ಚಂದ್ರಯಾನ–1 ಮತ್ತು ಚಂದ್ರಯಾನ 2ರಲ್ಲಿನ ಆದ ತಪ್ಪುಗಳು ಮರುಕಳಿಸದಂತೆ ಭಾರೀ ಎಚ್ಚರಿಕೆಯೊಂದಿಗೆ ಚಂದ್ರಯಾನ 3 ಯಶಸ್ವಿಗೊಳಿಸುವಲ್ಲಿ ಇಸ್ರೋ ವಿಜ್ಞಾನಿಗಳು ಯಶಸ್ವಿಯಾಗಿದ್ದಾರೆ. ವಿಜ್ಞಾನದ ಕೌತುಕವನ್ನು ಕಣ್ತುಂಬಿಕೊಂಡು ವಿಜ್ಞಾನಿಗಳನ್ನು ಪ್ರಧಾನಿ ನರೇಂದ್ರ ಮೋದಿ ಅಭಿನಂದಿಸಿದರು. ಚಂದ್ರಯಾನ 3 ಮೂಲಕ ಬಾಹ್ಯಾಕಾಶದ ಕೌತುಕವನ್ನು ಅರಿತುಕೊಂಡು, ಚಂದ್ರನ ಕುರಿತಾಗಿ ಭಾರತೀಯರ ಭಾವನೆಗಳನ್ನು ಬದಲಾಯಿಸುವ ಸುದಿನವಾಗಿದೆ ಎಂದು ಬಣ್ಣಿಸಿದರು.

ಚಂದ್ರನ ಮೇಲೆ ಅನೇಕ ದೇಶಗಳು ನೌಕೆಗಳನ್ನು ಇಳಿಸಿವೆ. ಆದರೆ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿದ ಮೊದಲ ದೇಶ ಎನ್ನುವ ಹೆಗ್ಗಳಿಕೆಗೆ ಭಾರತ ಪಾತ್ರವಾಗಿದೆ. ಆ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ಬಹುದೊಡ್ಡ ಸಾಧನೆ ಮಾಡಿದೆ. ಅದರಲ್ಲೂ ಮುಂದುವರಿದ ದೇಶಗಳ ಬಾಹ್ಯಾಕಾಶ ಸಂಸ್ಥೆ ಮಾಡದ ಕೆಲಸವನ್ನು ನಮ್ಮ ಇಸ್ರೋ ಮಾಡಿರುವುದು ಅತ್ಯಂತ ಅಭಿಮಾನದ ಸಂಗತಿ.

ಚಂದ್ರಯಾನ 3 ಯಶಸ್ವಿಗೆ ಶ್ರಮಿಸಿದ ವಿಜ್ಞಾನಿಗಳ ಶ್ರಮ ಸಾರ್ಥಕವಾಗಿದೆ. ಸತತ ನಾಲ್ಕು ತಪಸ್ಸಿನಂತೆ ಕೈಗೊಂಡ ಯಾನ ಇಂದು ಯಶಸ್ವಿಯಾಗಿದೆ. ಈ ಸಾಧನೆಗೆ ಕಾರಣರಾದ ಎಲ್ಲ ವಿಜ್ಞಾನಿಗಳಿಗೆ ಅಭಿನಂದನೆಗಳು. ಅಸಂಖ್ಯ ಭಾರತೀಯರ ಪ್ರಾರ್ಥನೆ ಫಲಿಸಿದೆ. ಚಂದ್ರಯಾನ 3 ಯಶಸ್ವಿಯಾದ ಈ ದಿನ, ಕೇವಲ ಚಂದ್ರನ ಮೇಲ್ಮೈ, ವಾತಾವರಣ ಅಧ್ಯಯನ ಜೊತೆಗೆ ದೇಶದಲ್ಲಿ ವೈಜ್ಞಾನಿಕ ಮನೋಭಾವ ಮೂಡುವ ಯಾನವೂ ಆಗಬೇಕು. ಇಂಥ ಹಲವಾರು ಪ್ರಯೋಗಗಳು ಇಸ್ರೋ ಮುಂದಾಗಲಿ. ಭಾರತದ ಕೀರ್ತಿ ಪತಾಕೆ ಸದಾ ಹಾರಾಡುತ್ತಿರಲಿ.

## ಆಗಸ್ಟ್ 25ರಂದು ವರಮಹಲಕ್ಷ್ಮೀ ವ್ರತಾಚರಣೆಯ ನಿಮಿತ್ತ ಲೇಖನ

# ವಿಷ್ಣು ಪತ್ನಿಯನ್ನು ಆರಾಧಿಸುವ ವರಮಹಾಲಕ್ಷ್ಮೀ ವ್ರತ





'ಲಕ್ಷಯತಿ ಸರ್ವಂ ಸದಾ ಇತಿ ಲಕ್ಷ್ಮೀ' ಸದಾ ಎಲ್ಲರನ್ನೂ ಗಮನಿಸುತ್ತಾ, ಎಲ್ಲರನ್ನೂ ಸಂತೋಷಪಡಿಸುವ, ಸಕಲ ನಾಮಾಂಕಿತಳಾದ ಮಹಾಲಕ್ಷ್ಮಿಯನ್ನು ಭಕ್ತಿಯಿಂದ ಪೂಜಿಸಲಾಗುತ್ತದೆ. ಜೀವ ಹಾಗೂ ಜಡಗಳನ್ನೂ ಪೋಷಿಸಿ ಕಾಪಾಡುವವಳು, ಸಕಲ ಚರಾಚರಗಳಲ್ಲೂ ಚೈತನ್ಯವಾಗಿರುವ ತಾಯಿಯನ್ನು ಧ್ಯಾನ ಪೂಜೆಗಳಿಂದ ಸಂತೃಪ್ತಿಗೊಳಿಸಬೇಕು. ಈ ಹಬ್ಬವನ್ನು ವ್ರತನಿಷ್ಠರು ಕಳಸಾದಿಗಳಲ್ಲಿ ಶ್ರೀ ದೇವಿಯನ್ನು ಆವಾಹನೆ ಮಾಡಿ ಆರಾಧಿಸುವರೂ ಉಂಟು. ನಿಯಮವಿಲ್ಲದೆ ಪೂಜಿಸುವವರೂ ಉಂಟು. ಮೇಲೆ ಹೇಳಿದಂತೆ ಶುಕ್ಲಪಕ್ಷದ ಹುಣ್ಣಿಮೆಗೆ ಸಮೀಪದ ಈ ದಿನ ಪವಿತ್ರವಾದದ್ದು. ಅಧಿಕ ಬಂದರೆ ಅಧಿಕಮಾಸದಲ್ಲಿ ಆಚರಿಸುವಂತಿಲ್ಲ. ನಿಜ ಶ್ರಾವಣಮಾಸದಲ್ಲೇ ಆಚರಿಸಬೇಕು.

ಪ್ರತಿ ಶ್ರಾವಣ ಮಾಸದ ಎರಡನೇ ಶುಕ್ರವಾರ, ವಿಷ್ಣು ಪತ್ನಿಯನ್ನು ಆರಾಧಿಸುವ ದಿನವನ್ನು 'ವರಮಹಾಲಕ್ಷ್ಮಿ ವ್ರತ' ಎಂದು ಆಚರಿಸಲಾಗುತ್ತದೆ.

**'ಶುಕ್ಲೇ ಶ್ರಾವಣಿಕೇ ಮಾಸೇ ಪೂರ್ಣಿಮೋಪ್ರಾನ್ತ್ಯಭಾರ್ಗವೇ**

**ವರಲಕ್ಷ್ಮ್ಯಾ ವ್ರತಂ ಕಾರ್ಯಂ ಸರ್ವಸಿದ್ಧಿ ಪ್ರದಾಯಕಂ**

**ನಭೋ ಮಾಸೇ ಪೂರ್ಣಿಮಾಯಾಂ ಅಂತಿಕಸ್ಥೇ ಭೃಗೋರ್ದಿನೇ**

**ಮತ್ಪೂಜಾ ತತ್ರ ಕರ್ತವ್ಯಾ ಸರ್ವಸಿದ್ಧಿ ಪ್ರದಾಯಿನಿ'**

'ವ್ರತರತ್ನ' ಪುಟದಿಂದಾಯ್ದ ವರಲಕ್ಷ್ಮೀ ವ್ರತವನ್ನು ಆಚರಿಸುವ ವಿಧಿಯನ್ನು ಆಯ್ದು ಓದುಗರಿಗೆ ತಿಳಿಸುತ್ತಿರುವೆ. ಎಷ್ಟೋ ವಿಚಾರಗಳು ಬಂದು ಹೋಗಿದ್ದರೂ, ಕೆಲವೊಮ್ಮೆ ಗೊತ್ತಿದ್ದರೂ ಕೂಡ ಮರೆತುಬಿಡುವ ಸ್ವಭಾವ ಮನುಷ್ಯನದು. ಮತ್ತೊಮ್ಮೆ ಆಚಾರ–ವಿಚಾರಗಳತ್ತ ಗಮನ ಹರಿಸೋಣ.

ಶ್ರಾವಣ ಶುಕ್ಲ ಪೂರ್ಣಿಮೆಯ ದಿನಕ್ಕೆ ಅತೀ ಹತ್ತಿರದ ಶುಕ್ರವಾರದಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ಶುಕ್ರಗ್ರಹವು ಪೂರ್ವದಲ್ಲಿ ಬೆಳಗುತ್ತಿರುವ ಸಮಯದಲ್ಲಿ ವರಲಕ್ಷ್ಮೀ ವ್ರತ ಆರಾಧನೆ ಮಾಡಬೇಕೆಂಬ ಶಾಸ್ತ್ರ ವಿಧಿಯನ್ನು ಇಲ್ಲಿ ನೋಡುತ್ತೇವೆ. ಆದರೆ, ಶುಕ್ಲಪಕ್ಷದ ಇತರ ಶುಕ್ರವಾರಗಳಲ್ಲಿಯೂ ವ್ರತವನ್ನು ಆಚರಿಸುವ ರೂಢಿ ಕಂಡುಬರುತ್ತದೆ.

ಶ್ರೀಲಕ್ಷ್ಮೀಯು ಕ್ಷೀರಸಾಗರದಲ್ಲಿ ಜನಿಸಿದಾಗ ಪಾರಿಜಾತದ ಚಿಗುರುಗಳಿಂದ ರಾಗ( ಕೆಂಬಣ್ಣ, ದುಷ್ಟವಾದ ಕಾಮ)ವನ್ನೂ, ಚಂದ್ರಕಲೆಯಿಂದ ಕೇವಲ ವಕ್ರತೆಯನ್ನು, ಉಚ್ಚೈಶ್ರೈವಸ್ಸಿನಿಂದ ಚಂಚಲತೆಯನ್ನು, ಕಾಲಕೂಟವಿಷದಿಂದ ಮೋಹನಶಕ್ತಿಯನ್ನು, ಮದಿರೆಯಿಂದ ಮದವನ್ನು ಮತ್ತು ಕೌಸ್ತುಭದಿಂದ ಕಡುನಿಷ್ಠುರತೆಯನ್ನೂ ಅವುಗಳ ಸಹವಾಸಪರಿಚಯದಿಂದ ಎತ್ತಿಕೊಂಡು ಬಂದಿದ್ದಾಳೆ.

ಧನಲಕ್ಷ್ಮೀ, ಧಾನ್ಯಲಕ್ಷ್ಮೀ, ಸಂತಾನಲಕ್ಷ್ಮೀ, ವಿದ್ಯಾಲಕ್ಷ್ಮೀ, ಶೌರ್ಯಲಕ್ಷ್ಮೀ, ಕೀರ್ತಿಲಕ್ಷ್ಮೀ, ಸೌಮ್ಯಲಕ್ಷ್ಮೀ ಮತ್ತು ವಿಜಯಲಕ್ಷ್ಮೀ ಇವು ಅಷ್ಟಲಕ್ಷ್ಮೀಯ ಸ್ವರೂಪಗಳು ಎಂಬುದನ್ನು ಆಗಮಗಳು ಹೇಳುತ್ತವೆ.

**ವಕ್ತ್ರಾಬ್ಜೇ ಭಾಗ್ಯಲಕ್ಷ್ಮೀ ಕರತಲಕಮಲೇ ಸರ್ವದಾ ಧಾನ್ಯಲಕ್ಷ್ಮೀ**

**ದೋರ್ದಂಡೇ ವೀರಲಕ್ಷ್ಮೀ ಹೃದಯಸರಸಿಜೇ ಭೂತಕಾರುಣ್ಯಲಕ್ಷ್ಮೀ।**

**ಖಡ್ಗಾಗ್ರೇ ಶೌರ್ಯಲಕ್ಷ್ಮೀ ನಿಖಿಲಗುಣಗಣಾಡಂಬರೇ ಕೀರ್ತಿಲಕ್ಷ್ಮೀ**

**ಸರ್ವಾಂಗೇ ಸೌಮ್ಯಲಕ್ಷ್ಮೀ ಸಪದಿ ಭವತು ಮೇ ಧರ್ಮಮೋಕ್ಷಾರ್ಥ ಸಿದ್ಧೇ॥**

ನನ್ನ ಮುಖಕಮಲವನ್ನು ಭಾಗ್ಯಲಕ್ಷ್ಮಿಯೂ, ಕರಕಮಲದಲ್ಲಿ ಧಾನ್ಯಲಕ್ಷ್ಮಿಯೂ, ತೋಳುಗಳಲ್ಲಿ ವೀರಲಕ್ಷ್ಮಿಯೂ, ಹೃದಯಕಮಲದಲ್ಲಿ ಭೂತದಯಾಲಕ್ಷ್ಮಿಯೂ, ಕತ್ತಿಯ ತುದಿಯಲ್ಲಿ ಶೌರ್ಯ ಲಕ್ಷ್ಮಿಯೂ, ಎಲ್ಲಾ ಗುಣಗಣಗಳನ್ನು ವೈಭವದಿಂದ ಪ್ರದರ್ಶಿಸುವಾಗ ಕೀರ್ತಿ ಲಕ್ಷ್ಮಿಯೂ, ಎಲ್ಲಾ ಅಂಗಗಳಲ್ಲಿಯೂ ಸೌಮ್ಯ ಲಕ್ಷ್ಮಿಯೂ ನನಗೆ ಒಡನೆ ಉಂಟಾಗಲಿ. ಅಲ್ಲಿ ಯಾವಾಗಲೂ ನೆಲೆಸಿರಲಿ. ಅವುಗಳಿಂದ ಮೋಕ್ಷವೂ ಮತ್ತು ಧರ್ಮವೂ ಸಿದ್ಧಿಸಲಿ. ಕಾಮಿನೀ ಕಾಂಚನಗಳನ್ನು, ಖ್ಯಾತಿ ಲಾಭಗಳನ್ನು, ಪೂಜೆಗಳನ್ನು ತೊರೆದ ಆತ್ಮಸಾಧಕನೂ ಕೂಡಾ, ಸನ್ಯಾಸಿಯೂ ಕೂಡಾ ಭೂತದಯೆ, ಕ್ಷಮೆ, ಅಸೂಯೆ ಇಂತಹ ಆತ್ಮಗುಣಸಂಪತ್ತನ್ನೂ, ಮೋಕ್ಷವನ್ನೂ ಪ್ರಾರ್ಥಿಸುತ್ತಾರೆ. ಹಾಗಾಗಿ ಇವುಗಳೆಲ್ಲದರ ಆಕಾರ ಲಕ್ಷ್ಮಿಯೇ ಆಗಿರುವುದರಿಂದ ಎಲ್ಲರಿಗೂ ಮಹಾಲಕ್ಷ್ಮಿಯೇ ಆರಾಧ್ಯಳು. ಈ ಕಾರಣದಿಂದಲೇ ಶೃತಿ, ಸ್ಮೃತಿ, ಪುರಾಣ, ಇತಿಹಾಸ, ಆಗಮಾದಿಗಳಲ್ಲಿ ಹೇಳಿರುವಂತೆ ಬ್ರಹ್ಮಾದಿ ದೇವತೆಗಳೂ ಮತ್ತು ಸರ್ವಪುರುಷಾರ್ಥ ಸಾಧಕರೂ, ಸಿದ್ಧರೂ ಈ ತಾಯಿಯನ್ನು ಪೂಜಿಸಿ ಕೃತಾರ್ಥರಾಗುತ್ತಾರೆ. ಅನೇಕ ಆಚಾರ್ಯರು ಕೂಡಾ ಸಾಕಷ್ಟು ಭಕ್ತಿರಸದಿಂದ ದೇವಿಯನ್ನು ಅರ್ಚಿಸಿದ್ದಾರೆ.

ಆಯಾ ದೇವತಾಕೇಂದ್ರಗಳು ಸಹಜವಾಗಿ ತೆರೆದು, ದೇವತಾನುಗ್ರಹವು ಸಹಜವಾಗಿ ಹರಿಯುವುದಕ್ಕೆ ಒಳ–ಹೊರ ಪ್ರಕೃತಿಗಳ ಅನುಕೂಲ ಇರುವ ದಿನವನ್ನು ಜ್ಞಾನಿಗಳು ಆಯ್ಕೆ ಮಾಡಿರುತ್ತಾರೆ. ಶ್ರಾವಣಮಾಸ, ಶನಿವಾರ ವಿಷ್ಣುವಿನ ಆರಾಧನೆಯಾದರೆ, ಕಾರ್ತಿಕ ಮಾಸ, ಸೋಮವಾರ ಶಿವನಿಗೆ ಶ್ರೇಷ್ಠ. ಹಾಗಾಗಿ ವಿಷ್ಣು ಪ್ರಿಯೆಯನ್ನು ಇದೇ ಮಾಸದಲ್ಲಿ ಪೂಜಿಸುವುದು ಶ್ರೇಷ್ಠ ಎನ್ನಲಾಗಿದೆ. ಶ್ರೀದೇವಿಗೆ ಧ್ಯಾನ, ಧೂಪ, ದೀಪ ನೈವೇದ್ಯಗಳಂತಹ ಷೋಡಶೋಪಚಾರ ಪೂಜೆಯನ್ನು ಸಮರ್ಪಿಸಬೇಕು.

ಸಜ್ಜೆಯಪ್ಪ, ಸಿಹಿಗಡುಬು ಇವು ಮಧುರ ಸಿಹಿಯಿಂದ ಕೂಡಿರುವುದರಿಂದ ಇವು ನೈವೇದ್ಯಕ್ಕೆ ಶ್ರೇಷ್ಠ ಎನ್ನಲಾಗಿದೆ. ನಾರಾಯಣನಿಗೆ ಪ್ರಿಯವಾದ ಈ ಶ್ರಾವಣಮಾಸವು ಲಕ್ಷ್ಮಿಗೂ ಪ್ರಿಯವಾದ್ದರಿಂದ ಈ ಮಾಸವು ತಾಯಿಯ ಪೂಜೆಗೆ ಶ್ರೇಷ್ಠವಾಗಿದೆ. ಶುಕ್ಲಕೃಷ್ಣಪಕ್ಷದ ಮೊದಲನೆಯದು ದೇವತೆಗಳಿಗೆ ಪ್ರಿಯ, ಎರಡನೆಯದು ಪಿತೃಗಳಿಗೆ ಪ್ರಿಯವಾದುದು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಯಥಾಶಕ್ತಿ, ಭಕ್ತಿಗಳಿಂದ ಹಬ್ಬವನ್ನು ಆಚರಿಸುತ್ತಿರುವ ಸರ್ವರಿಗೂ ಆ ತಾಯಿ ಸಕಲ ಸನ್ಮಂಗಳವನ್ನುಂಟುಮಾಡಲಿ.

**– ಸಿ.ಎನ್ ಭಾಗ್ಯಲಕ್ಷ್ಮೀ ನಾರಾಯಣ,** ಮೈಸೂರು.

# ರೋಟರಿ ಸಂಸ್ಥೆಯಿಂದ ವನಮಹೋತ್ಸವ



**■ವಿಜಯಸಾಕ್ಷಿ ಸುದ್ದಿ, ಗದಗ**

ಮರಗಳು ನಮಗೆ ಶುದ್ಧವಾದ ಆಮ್ಲಜನಕ ನೀಡುವುದರ ಜೊತೆಗೆ ಮಣ್ಣಿನ ಸವೆತವನ್ನು ಕೂಡ ತಡೆಗಟ್ಟುತ್ತದೆ. ಮರಗಳನ್ನು ಹೆಚ್ಚು ಹೆಚ್ಚು ನೆಟ್ಟು ಪೋಷಣೆ ಮಾಡುವುದರಿಂದ ಜಾಗತಿಕ ತಾಪಮಾನವನ್ನು ಕಡಿಮೆಗೊಳಿಸಬಹುದು ಹಾಗೂ ವಾತಾವರಣದಲ್ಲಿರುವ ಕಾರ್ಬನ್ ಡೈಆಕ್ಸೈಡ್‌ನ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಬಹುದು. ಮರಗಳು ಅನೇಕ ಪ್ರಾಣಿ ಪಕ್ಷಿಗಳಿಗೆ ಆಹಾರ ನೀಡುವುದರ ಜೊತೆಗೆ ಆಶ್ರಯವನ್ನು ಕೂಡ ನೀಡುತ್ತದೆ.

ಪ್ರತಿಯೊಬ್ಬರು ಕನಿಷ್ಠ ಒಂದು ಸಸಿಯನ್ನಾದರೂ ನೆಟ್ಟು ಪೋಷಿಸಬೇಕೆಂದು ಡಾ.ಪ್ರದೀಪ್ ಉಗಲಾಟ ಅಭಿಪ್ರಾಯಪಟ್ಟರು.

ರೋಟರಿ ಕ್ಲಬ್ ಗದಗ–ಬೆಟಗೇರಿಯ ವತಿಯಿಂದ ಹಮ್ಮಿಕೊಂಡಿದ್ದ ಗಿಡ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾರ್ಯಕ್ರಮದಲ್ಲಿ ರೋಟರಿ ಸಂಸ್ಥೆಯ ಸದಸ್ಯರಾದ ಬಾಲಕೃಷ್ಣ ಕಾಮತ, ಶಿವಾಚಾರ್ಯ ಹೊಸಳ್ಳಿಮಠ, ಅಕ್ಷಯ ಶೆಟ್ಟಿ, ಡಾ. ಜಿ.ಬಿ ಪಾಟೀಲ, ಶೈಲೇಂದ್ರ ಬಿರಾದರ, ಡಾ. ಕಮಲಾಕ್ಷಿ ಅಂಗಡಿ, ಡಾ. ಆರ್.ಬಿ ಉಪ್ಪಿನ, ಇನ್ನರ್ ವ್ಹೀಲ್ ಸಂಸ್ಥೆಯ ಕಾರ್ಯದರ್ಶಿ ಹೇಮಲತಾ ಮುಂಗಾಲಿಯ, ಜ್ಯೋತಿ ಭರಮಗೌಡರ, ನೀಲಾಂಬಿಕಾ ಉಗಲಾಟ, ಮಂಜುಳಾ ಅಕ್ಕಿ, ವಿಜಯಲಕ್ಷ್ಮಿ ಮಾನ್ವಿ, ನಾಗರತ್ನ ಪಾಟೀಲ, ಪ್ರತಿಭಾ ಭದ್ರಶೆಟ್ಟಿ, ವಿದ್ಯಾ ಗಂಜಿಹಾಳ, ಶ್ರೀನಿಧಿ ಉಗಲಾಟ, ಶಿವಶಾಂತ ಉಗಲಾಟ, ಶ್ರೀರಕ್ಷಾ ಉಗಲಾಟ ಮುಂತಾದವರು ಉಪಸ್ಥಿತರಿದ್ದರು. ಕಾರ್ಯದರ್ಶಿ ವೀಣಾ ತಿರ್ಲಾಪೂರ ವಂದಿಸಿದರು.

# ಕೃಷಿ ಅಧಿಕಾರಿಗಳಿಂದ ಕ್ಷೇತ್ರಭೇಟಿ, ಪರಿಶೀಲನೆ



ಕಳೆದ ವರ್ಷ ಅತಿವೃಷ್ಟಿಯಿಂದ ರೈತರು ಹಾನಿ ಅನುಭವಿಸಿದ್ದರು. ಈ ವರ್ಷ ಮಳೆಯ ಕೊರತೆಯಿಂದ ಬಿತ್ತಿದ ಬೆಳೆಗಳು ಒಣಗಿವೆ. ಜಿಲ್ಲೆಯನ್ನು ಬರಗಾಲ ಪೀಡಿತ ಜಿಲ್ಲೆ ಎಂದು ಘೋಷಿಸಬೇಕು. ಸಾಲದ ಸಂಕೋಲೆಯಲ್ಲಿ ಸಿಲುಕಿರುವ ರೈತರ ನೆರವಿಗೆ ಸರ್ಕಾರ ದಿಟ್ಟ ನಿಲುವು ತಾಳಿ ರೈತರು ಪಾವತಿಸಿರುವ ಬೆಳೆವಿಮೆ ಪರಿಹಾರದೊಂದಿಗೆ ಬೆಳೆಹಾನಿ ಪರಿಹಾರ ಕಲ್ಪಿಸಬೇಕು. ಬ್ಯಾಂಕಿನಿಂದ ರೈತರಿಗೆ ಸಾಲದ ನೊಟೀಸ್ ಸ್ಥಗಿತಗೊಳಿಸಿ, ಮತ್ತು ಸಾಲಮನ್ನಾ ಮಾಡಬೇಕು.

**– ಚಂಬಣ್ಣ ಬಾಳಿಕಾಯಿ.** ಸಮಗ್ರ ರೈತ ಹೋರಾಟ ಸಮಿತಿ ತಾಲೂಕಾಧ್ಯಕ್ಷರು.

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಮಳೆಯ ಕೊರತೆಯಿಂದ ತಾಲೂಕಿನಾದ್ಯಂತ ಒಣಗುತ್ತಿರುವ ಬೆಳೆಯನ್ನು ಜಿಲ್ಲಾ ಉಪಕೃಷಿ ನಿರ್ದೇಶಕ ಕರಿಯಲ್ಲಪ್ಪ ಕೊರಚರ ನೇತೃತ್ವದ ಕೃಷಿ ಅಧಿಕಾರಿಗಳ ತಂಡ ಮಂಗಳವಾರ ಪರಿಶೀಲಿಸಿ ಮಾಹಿತಿ ಸಂಗ್ರಹಿಸಿದರು.

ತಾಲೂಕಿನ ಅಡರಕಟ್ಟಿ, ಕೊಂಡಿಕೊಪ್ಪ, ಹರದಗಟ್ಟಿ, ಬಡ್ನಿ, ಹಿರೇಮಲ್ಲಾಪುರ, ಹುಲ್ಲೂರ, ಸೂರಣಗಿ, ಬಾಲೆಹೊಸೂರ, ದೊಡ್ಡೂರ, ಗೊಜನೂರ ಸೇರಿ ಅನೇಕ ಗ್ರಾಮಗಳ ಜಮೀನುಗಳಿಗೆ ಭೇಟಿ ನೀಡಿದ ಅಧಿಕಾರಿಗಳು ಮೆಕ್ಕೆಜೋಳ, ಹತ್ತಿ, ಶೇಂಗಾ, ಹೆಸರು, ಉಳ್ಳಾಗಡ್ಡಿ ಮುಂತಾದ ಎಲ್ಲ ಬೆಳೆಗಳು ಒಣಗುತ್ತಿರುವುದನ್ನು ಪರಿಶೀಲಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಉಪಕೃಷಿ ನಿರ್ದೇಶಕ ಕರಿಯಲ್ಲಪ್ಪ ಕೊರಚರ, ಜೂನ್ ಮತ್ತು ಆಗಸ್ಟ್ ತಿಂಗಳಲ್ಲಿ ಮಳೆಯ ಕೊರತೆಯಾಗಿದೆ. ಮುಖ್ಯವಾಗಿ ಮಸಾರಿ ಜಮೀನಿನಲ್ಲಿನ ಮೆಕ್ಕೆಜೋಳ ಮಳೆಯಾದರೂ ಸುಧಾರಿಸಲಾರದಷ್ಟು ಒಣಗಿದೆ. ಈಗಾಗಲೇ ಶೇ.50ರಷ್ಟು ಬೆಳೆಗಳು ಸುಧಾರಿಸಲಾರಷ್ಟು ಬಾಡಿದ್ದು, ವಾರದಲ್ಲಿ ಮಳೆ ಬಾರದೇ ಬಿಸಿಲು ಮುಂದುವರೆದರೆ ಶೇ.70ಕ್ಕಿಂತಲೂ ಹೆಚ್ಚಿನ ಬೆಳೆ ಒಣಗುವ ಸಾಧ್ಯತೆಯಿದೆ. ವಸ್ತುಸ್ಥಿತಿಯನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.

ಕೃಷಿ ಅಧಿಕಾರಿ ಚಂದ್ರಶೇಖರ ನರಸಮ್ಮನವರ, ಸಹಾಯಕ ಅಧಿಕಾರಿ ಎಸ್.ಬಿ ಲಮಾಣಿ ಇದ್ದರು.

# ಮಿಜೋರಾಂನಲ್ಲಿ ರೈಲ್ವೇ ಬ್ರಿಡ್ಜ್ ಕುಸಿತ; 17 ಕಾರ್ಮಿಕರು ಸಾವು

**■ವಿಜಯಸಾಕ್ಷಿ ಸುದ್ದಿ, ಮಿಜೋರಾಂ**

ನಿರ್ಮಾಣ ಹಂತದ ರೈಲ್ವೇ ಬ್ರಿಡ್ಜ್ ಕುಸಿದು ಬಿದ್ದು 17 ಮಂದಿ ಮೃತಪಟ್ಟ ಘಟನೆ ಮಿಜೋರಾಂನ ಸೈರಾಂಗ್‌ನಲ್ಲಿ ಐಜ್ವಾಲ್ ಬಳಿಯಲ್ಲಿ ನಡೆದಿದೆ. ಘಟನೆಯ ಕುರಿತ ಮಿಜೋರಾಂ ಮುಖ್ಯಮಂತ್ರಿ ಝೋರಂತಂಗ ಅವರು ಮಾಹಿತಿ ನೀಡಿದ್ದು, ಈ ಕುರಿತು ಚಿತ್ರ ಮತ್ತು ವೀಡಿಯೊವನ್ನು ಹಂಚಿಕೊಂಡಿದ್ದಾರೆ. ಸಾಯಿರಾಂಗ್‌ನಲ್ಲಿ ನಿರ್ಮಾಣ ಸೇತುವೆ ಕುಸಿದು ಸುಮಾರು 17 ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಸೇತುವೆಯ ಅವಶೇಷಗಳಡಿ ಇನ್ನಷ್ಟು ಮಂದಿ ಸಿಲುಕಿರುವ ಶಂಕೆ ವ್ಯಕ್ತವಾಗಿದೆ. ಘಟನೆ ಬಳಿಕ ರಕ್ಷಣಾ ಕಾರ್ಯಾಚರಣೆ ನಡೆಸಲಾಗುತ್ತಿದೆ. ಸೇತುವೆ ಕುಸಿತದ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಘಟನೆ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ. ಮೃತರಲ್ಲಿ ಪಶ್ಚಿಮ ಬಂಗಾಳದ ಮಾಲ್ಡಾ ಜಿಲ್ಲೆಯ ಕಾರ್ಮಿಕರು ಸೇರಿದ್ದಾರೆ ಎಂದು ಮಮತಾ ಬ್ಯಾನರ್ಜಿ ಹೇಳಿದ್ದಾರೆ.

ಸೋಷಿಯಲ್ ಮೀಡಿಯಾದಲ್ಲಿ ಪಶ್ಚಿಮ ಬಂಗಾಳ ಸಿಎಂ ಮಮತಾ ಬ್ಯಾನರ್ಜಿ ಈ ಕುರಿತು ಪ್ರತಿಕ್ರಿಯಿಸಿ, ಮಿಜೋರಾಂನಲ್ಲಿ ನಿರ್ಮಾಣ ಹಂತದ ರೈಲ್ವೆ ಸೇತುವೆಯ ಕುಸಿತದ ಬಗ್ಗೆ ತಿಳಿದು ಆಘಾತಕ್ಕೊಳಗಾದೆ. ಘಟನೆಯಲ್ಲಿ ನಮ್ಮ ಮಾಲ್ಡಾ ಜಿಲ್ಲೆಯ ಕೆಲ ಕಾರ್ಮಿಕರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ಹೇಳಿದ್ದಾರೆ.

# ವರ್ಷಕ್ಕೆ 2 ಬಾರಿ ಬೋರ್ಡ್ ಪರೀಕ್ಷೆ ಸಚಿವ ಧರ್ಮೇಂದ್ರ ಪ್ರಧಾನ್

**■ವಿಜಯಸಾಕ್ಷಿ ಸುದ್ದಿ, ನವದೆಹಲಿ**

ಕೇಂದ್ರ ಸರಕಾರ ಹೊಸ ಶಿಕ್ಷಣ ನೀತಿ (NEP) ಗೆ ಅನುಗುಣವಾಗಿ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಮುಖ ಬದಲಾವಣೆಗಳನ್ನು ಪ್ರಕಟಿಸಿದೆ. 2024ರ ಶೈಕ್ಷಣಿಕ ಅವಧಿಗೆ ಹೊಸ ಪಠ್ಯಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಹೊಸ ಪಠ್ಯಕ್ರಮದ ಚೌಕಟ್ಟನ್ನು ಶಿಕ್ಷಣ ಸಚಿವಾಲಯ ಪ್ರಕಟಿಸಿದೆ.

ಈ ಕುರಿತು ಮಾಹಿತಿ ನೀಡಿದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) 2020ರ ಪ್ರಕಾರ ಹೊಸ ಪಠ್ಯಕ್ರಮ ಚೌಕಟ್ಟು ಸಿದ್ಧವಾಗಿದೆ ಮತ್ತು 2024 ರ ಶೈಕ್ಷಣಿಕ ಅವಧಿಗೆ ಪಠ್ಯಪುಸ್ತಕಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಹೇಳಿದ್ದಾರೆ. 11 ಮತ್ತು 12 ನೇ ತರಗತಿಯ ವಿದ್ಯಾರ್ಥಿಗಳು ಎರಡು ಭಾಷೆಗಳನ್ನು ಅಧ್ಯಯನ ಮಾಡಬೇಕಾಗಿದೆ ಮತ್ತು ಅವುಗಳಲ್ಲಿ ಕನಿಷ್ಠ ಒಂದು ಭಾರತೀಯ ಭಾಷೆಯಾಗಿರಬೇಕು ಎಂದು ಹೇಳಿದ್ದಾರೆ.

ವರ್ಷಕ್ಕೆ ಎರಡು ಬಾರಿ ಬೋರ್ಡ್ ಪರೀಕ್ಷೆಗಳನ್ನು ನಡೆಸಲಾಗುವುದು, ವಿದ್ಯಾರ್ಥಿಗಳಿಗೆ ಉತ್ತಮ ಅಂಕಗಳನ್ನು ಪಡೆಯಲು ಸಹಕಾರಿಯಾಗಲಿದೆ ಎಂದು ಸಚಿವಾಲಯ ಹೇಳಿದೆ.

# ಸಿದ್ದಾಪುರ ಕೆರೆಗೆ ಬಾಗಿನ ಅರ್ಪಣೆ, ಹಸ್ತಾಂತರ



**■ವಿಜಯಸಾಕ್ಷಿ ಸುದ್ದಿ, ನರಗುಂದ**

ತಾಲೂಕಿನ ಸಿದ್ದಾಪೂರ ಕಾರ್ಯಕ್ಷೇತ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ 483ನೇ ಕೆರೆ ಹಸ್ತಾಂತರ, ಬಾಗಿನ ಅರ್ಪಣೆ ಹಾಗೂ ಕೆರೆ ಅಂಗಳದಲ್ಲಿ ಗಿಡ ನೆಡುವ ಕಾರ್ಯಕ್ರಮ ನಡೆಯಿತು.

ಜಿಲ್ಲಾ ನಿರ್ದೇಶಕ ಯೋಗೀಶ್ ಮಾತನಾಡಿ, ನಮ್ಮೂರು ನಮ್ಮ ಕೆರೆಯ ಕಾರ್ಯಕ್ರಮ ನಡೆದು ಬಂದ ಹಾದಿ ಮತ್ತು ಕೆರೆಯ ಅಭಿವೃದ್ಧಿ, ಊರಿನ ಗ್ರಾಮಸ್ಥರ ಉತ್ತಮ ಸಹಕಾರದಿಂದ ಕೆರೆ ಹೂಳೆತ್ತುವ ಕಾರ್ಯಕ್ರಮ ಚೆನ್ನಾಗಿ ನಡೆದಿದೆ. ಕೆರೆಯನ್ನು ಸ್ವಚ್ಛತೆಯಿಂದ ಕಾಪಾಡಿಕೊಳ್ಳಲು ಗ್ರಾಮಸ್ಥರಿಗೆ ಸೂಚಿಸಿದರು.

ಕೆರೆ ಸಮಿತಿ ಅಧ್ಯಕ್ಷ ಬಸನಗೌಡ ದೊಡ್ಡಗೌಡ್ರ ಮಾತನಾಡಿ, ಯೋಜನೆಯು ನಮ್ಮೂರಿಗೆ ಉತ್ತಮವಾದ ಕೆರೆ ಅಭಿವೃದ್ಧಿಯನ್ನು ಮಾಡಿದೆ. ಇದಕ್ಕೆ ನಮ್ಮೂರಿನ ಎಲ್ಲಾ ಗ್ರಾಮಸ್ಥರ ಸಹಕಾರದಿಂದ ಈ ಕೆರೆಯನ್ನು ಪುನಶ್ಚೇತನ ಮಾಡಲಾಗಿದೆ. ಸುತ್ತಮುತ್ತಲಿನ ರೈತರ ಜಮೀನಿನ ಬೋರವೆಲ್‌ಗಳು ಅಂತರ್ಜಲ ಮಟ್ಟಕ್ಕೆ ಮತ್ತು ಪ್ರಾಣಿಪಕ್ಷಿಗಳ, ದನಕರುಗಳಿಗೆ ಈ ಕೆರೆಯ ನೀರು ಉಪಯುಕ್ತವಾಗಿದೆ ಎಂದರು. ಕಾರ್ಯಕ್ರಮದಲ್ಲಿ ಎಚ್ ಬಿ ಅಸೂಟಿ, ಸುರೇಶಯ್ಯ ಹಿರೇಮಠ, ಸುಂದರವ್ವ ಬಡಿಗೇರ, ಪಿಡಿಓ ಕೃಷ್ಣಮ್ಮ ಹಾದಿಮನಿ, ಬಸನಗೌಡ ದೊಡಗೌಡ್ರ, ವಿನಯಕುಮಾರ ಪಾಟೀಲ, ನಿರ್ಮಲ ಕುರುಬರ, ಜಗದೀಶ ಬಿ, ವಲಯ ಮೇಲ್ವಿಚಾರಕ ರಾಜೇಸಾಬ ತಹಸೀಲ್ದಾರ, ಕೃಷಿ ಮೇಲ್ವಿಚಾರಕ ಗುಡ್ಡಾಚಾರಿ, ಸೇವಾ ಪ್ರತಿನಿಧಿಗಳಾದ ಪೂರ್ಣಿಮಾ, ಜಯಶ್ರೀ, ಭಾರತಿ, ಸಬೀನಾ, ಶೋಭಾ ಉಪಸ್ಥಿತರಿದ್ದರು.

## ಗೊಜನೂರ ಗ್ರಾಮದ ಗುಡಿಸಲು ವಾಸಿಗಳಿಗೆ ಹಕ್ಕುಪತ್ರ / ನಿಟ್ಟುಸಿರಾದ ನಿವಾಸಿಗಳು

# ಅಕ್ರಮ–ಸಕ್ರಮದಲ್ಲಿ ಸಲ್ಲಿಸಿದ 168 ಅರ್ಜಿಗಳ ಪರಿಗಣನೆ



ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಸಂವಿದಾನಬದ್ಧ ಹಕ್ಕುಗಳನ್ನು ಪಡೆಯಲು ಅರ್ಹನಿದ್ದಾನೆ. ಹಾಗೆಂದು ಸರ್ಕಾರದ ನಿಯಮಗಳನ್ನು ಮೀರಲು ಸಾಧ್ಯವಿಲ್ಲ. ಈ ಹಿನ್ನಲೆಯಲ್ಲಿ ತಾವು ಸರ್ಕಾರದ ಗೋಮಾಳ ಜಮೀನಿನಲ್ಲಿ 30 ವರ್ಷಗಳಿಂದ ವಾಸವಿದ್ದರೂ ಹಕ್ಕುಪತ್ರ ನೀಡಲು ಕೆಲ ಕಾನೂನು ತೊಡಕುಗಳಿದ್ದುರಿಂದ ಹಕ್ಕುಪತ್ರ ನೀಡಲು ವಿಳಂಬವಾಗಿದೆ. ಈ ಪ್ರದೇಶದ ಅರ್ಹ ಫಲಾನುಭವಿಗಳು ಮತ್ತು ಅಕ್ರಮ–ಸಕ್ರಮದಲ್ಲಿ ಅರ್ಜಿ ಸಲ್ಲಿಸಿದ ಗುಡಿಸಲು ವಾಸಿಗಳಿಗೆ ಮೊದಲ ಹಂತದಲ್ಲಿ ತಾತ್ಕಾಲಿಕ ಹಕ್ಕುಪತ್ರ ನೀಡಲಾಗಿದೆ.

**– ಕೆ. ಆನಂದಶೀಲ.**

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಗೊಜನೂರ ಗ್ರಾಮದ ಗುಡ್ಡದಂಚಿನಲ್ಲಿ 30 ವರ್ಷಗಳಿಂದ ನೆಲೆಸಿರುವ ಕುಟುಂಬಗಳಿಗೆ ತಹಸೀಲ್ದಾರ ಕೆ. ಆನಂದಶೀಲ ಅವರು ಕೆಲವು ನಿಬಂಧನೆಗೊಳಪಟ್ಟು ತಾತ್ಕಾಲಿಕ ಹಕ್ಕು ಪತ್ರಗಳನ್ನು ವಿತರಿಸಿದರು.

ಗ್ರಾಮದ ಗುಡ್ಡದಂಚಿನ ಸರ್ವೆ ನಂ–214, 215ರಲ್ಲಿ ಸುಮಾರು 200ಕ್ಕೂ ಹೆಚ್ಚು ಕುಟುಂಬಗಳು ಕಳೆದ 30 ವರ್ಷಗಳಿಂದ ಗುಡಿಸಲು ಕಟ್ಟಿಕೊಂಡು ವಾಸವಾಗಿದ್ದರು. ಗ್ರಾಮ ಪಂಚಾಯಿತಿಗೆ ತೆರಿಗೆಯನ್ನೂ ಕಟ್ಟುತ್ತಿದ್ದ ಇವರು, ಹಕ್ಕುಪತ್ರ ಮತ್ತು ಮೂಲಭೂತ ಸೌಲಭ್ಯಕ್ಕಾಗಿ ನಿರಂತರ ಹೋರಾಟ ಮಾಡುತ್ತಲೇ ಬಂದಿದ್ದರು. ಚುನಾವಣೆಯ ಸಂದರ್ಭದಲ್ಲಿ ಮತದಾನ ಬಹಿಷ್ಕರಿಸಿದ ಸಂದರ್ಭದಲ್ಲಿ ಸ್ಥಳಕ್ಕೆ ಆಗಮಿಸಿದ ಅಧಿಕಾರಿಗಳು ಭರವಸೆ ನೀಡಿ, ಮತದಾನಕ್ಕೆ ಮನವೊಲಿಸುವ ಪ್ರಯತ್ನ ನಡೆಯುತ್ತಲೇ ಇತ್ತು. ಇತ್ತೀಚೆಗೆ ನಡೆದ ವಿಧಾನಸಭೆ ಚುನಾವಣೆಯಲ್ಲೂ ಮತದಾನ ಬಹಿಷ್ಕರಿಸಿದ್ದರು. ಸತತ ಹೋರಾಟಗಳ ತರುವಾಯ ಅಕ್ರಮ–ಸಕ್ರಮದಲ್ಲಿ ಸಲ್ಲಿಸಿದ 168 ಅರ್ಜಿಗಳನ್ನು ಪರಿಗಣಿಸಿದ ತಹಸೀಲ್ದಾರರು ಜಿಲ್ಲಾಧಿಕಾರಿಗಳ ಮಾರ್ಗದರ್ಶನದಲ್ಲಿ 100ಕ್ಕೂ ಹೆಚ್ಚು ಕುಟುಂಬಳಿಗೆ ಷರತ್ತುಬದ್ಧವಾಗಿ ತಾತ್ಕಾಲಿಕ ಹಕ್ಕುಪತ್ರಗಳನ್ನು ವಿತರಿಸಿದರು.

ಈ ವೇಳೆ ಕಂದಾಯ ನಿರೀಕ್ಷಕ ಬಿ.ಎಂ ಕಾತರಾಳ, ಶಿರಸ್ತೆದಾರ ರೇಣುಕಾ ಹರಿಜನ, ಪ್ರಶಾಂತ ಸನದಿ, ಡಿ.ಎಲ್ ವಿಭೂತಿ, ಆರ್.ಬಿ ಶಿರಹಟ್ಟಿ, ಪಿಡಿಓ ಶಿವಾನಂದ ಮಾಳವಾಡ, ಶಿವನಗೌಡ ಪಾಟೀಲ, ಶಂಕರಗೌಡ ಪಾಟೀಲ, ಹಕ್ಕು ಪತ್ರ ಹೋರಾಟಗಾರ ಚೇತನ ಶಿ.ಕಣವಿ, ಗ್ರಾ ಪಂ ಅಧ್ಯಕ್ಷೆ ನೀಲವ್ವ ಮಾದರ, ಮಾಂಹಾತಗೌಡ ಪಾಟೀಲ, ಸದ್ಯಸರಾದ ಮಂಜುನಾಥ ಚಲವಾದಿ, ನೀಲಪ್ಪ ಗುಡ್ಡಣ್ಣವರ, ಗಂಗಾಧರ ಪರಸಣ್ಣವರ, ನೀಲವ್ವ ಪಾಟೀಲ, ದ್ಯಾಮವ್ವ ಮೆಣಸಿನಕಾಯಿ, ಫಾತೀಮಾ ಮುಲ್ಲಾನವರ, ನೀಲಪ್ಪ ಗುಡ್ಡಣ್ಣವರ ಸೇರಿದಂತೆ ನಿವಾಸಿಗಳು ಇದ್ದರು.

# ಹಾಸ್ಟೆಲ್‌ನಲ್ಲಿ ನೇಣು ಬಿಗಿದುಕೊಂಡು 9ನೇ ತರಗತಿ ವಿದ್ಯಾರ್ಥಿ ಆತ್ಮಹತ್ಯೆ

**■ವಿಜಯಸಾಕ್ಷಿ ಸುದ್ದಿ, ಚಿಕ್ಕಮಗಳೂರು**

ಚಿಕ್ಕಮಗಳೂರು ಜಿಲ್ಲೆಯ ಹಾಸ್ಟೆಲ್‌ನಲ್ಲಿ 9ನೇ ತರಗತಿ ವಿದ್ಯಾರ್ಥಿಯೊಬ್ಬ ಬುಧವಾರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಆಘಾತಕಾರಿ ಘಟನೆಯೊಂದು ನಡೆದಿದೆ.

ಮೃತ ವಿದ್ಯಾರ್ಥಿಯನ್ನು ಶ್ರೀನಿವಾಸ್ ಎಂದು ಗುರುತಿಸಲಾಗಿದೆ. ಶ್ರೀನಿವಾಸ್ ಖಾಸಗಿ ಶಾಲೆಯಲ್ಲಿ ಓದುತ್ತಿದ್ದು, ಚಿಕ್ಕಮಗಳೂರು ನಗರ ಸಮೀಪದ ಕೊಪ್ಪ ಪಟ್ಟಣದ ಹಾಸ್ಟೆಲ್‌ನಲ್ಲಿ ತಂಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀನಿವಾಸ್ ಅವರು ವಿದ್ಯಾಭ್ಯಾಸದಲ್ಲಿ ಉತ್ತಮನಾಗಿದ್ದನು ಮತ್ತು ಶಿಕ್ಷಕರು ಮತ್ತು ಆತನ ಸ್ನೇಹಿತರಲ್ಲಿ ಉತ್ತಮ ಹೆಸರು ಗಳಿಸಿದ್ದನು. ಮಂಗಳವಾರ ರಾತ್ರಿ ಈ ಘಟನೆ ನಡೆದಿದ್ದು, ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ. ಪೊಲೀಸರು, ಶಿಕ್ಷಕರು ಮತ್ತು ಹಾಸ್ಟೆಲ್ ಆಡಳಿತ ಮಂಡಳಿಯ ಹೇಳಿಕೆಗಳನ್ನು ದಾಖಲಿಸಿಕೊಳ್ಳಲು ಆರಂಭಿಸಿದ್ದಾರೆ. ಕೊಪ್ಪ ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ.

**ನೀವೂ ನಮ್ಮ ಜೊತೆ ಕೈಜೋಡಿಸಿ**

**'ವಿಜಯಸಾಕ್ಷಿ'**

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.
ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..
ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.
E-mail: vijayasakshidaily@gmail.com
ಮೊ : 9019256545

# ನೆಲ-ಜಲ-ಭಾಷೆಯ ವಿಚಾರದಲ್ಲಿ ರಾಜಕೀಯ ಬೇಡ

▶▶ ಮೊದಲನೇ ಪುಟದಿಂದ

ವಿರುದ್ಧ ಹರಿಹಾಯ್ದರು. ಹಲವು ಬಿಜೆಪಿ ಶಾಸಕರು ಕಾಂಗ್ರೆಸ್‌ಗೆ ಪಕ್ಷಾಂತರ ಮಾಡಲಿದ್ದಾರೆ ಎಂಬ ಊಹಾಪೋಹಗಳ ಕುರಿತು ಪ್ರತಿಕ್ರಿಯಿಸಿದ ಸಚಿವ ಎಂ.ಬಿ ಪಾಟೀಲ, ಯಾರನ್ನು ಪಕ್ಷಕ್ಕೆ ಸೇರಿಸಿಕೊಳ್ಳಬೇಕೆಂಬ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ನಿರ್ಧರಿಸುತ್ತದೆ. ಯಾರು ಬರಲಿದ್ದಾರೆ ಎಂದು ನಾನು ಕೂಡ ಮಾಧ್ಯಮಗಳಿಂದ ತಿಳಿದುಕೊಂಡಿದ್ದಷ್ಟೇ. ಕಾಂಗ್ರೆಸ್ ಪಕ್ಷ ಎಲ್ಲರನ್ನೂ ಕಣ್ಣುಮುಚ್ಚಿ ಸೇರಿಸಿಕೊಳ್ಳುವುದಿಲ್ಲ.

ಸ್ಥಳೀಯ ಶಾಸಕರು, ಸಚಿವರ ಅಭಿಪ್ರಾಯ ಪಡೆದು, ಪಕ್ಷಕ್ಕೆ ಬಲ ತುಂಬುವ ಸಾಮರ್ಥ್ಯವಿರುವವರನ್ನು ಸೇರಿಸಿಕೊಳ್ಳುತ್ತೇವೆ ಎಂದರು.

ಮರ್ಯಾದೆ ಇದ್ದವರಾರೂ ಕಾಂಗ್ರೆಸ್‌ಗೆ ಹೋಗುವುದಿಲ್ಲ ಎಂಬ ಸಿ.ಟಿ ರವಿ ಹೇಳಿಕೆಯ ವಿಚಾರವಾಗಿ ಪ್ರತಿಕ್ರಿಯಿಸಿ, ಅವರಿಗೆ ಮರ್ಯಾದೆ ಬಹಳ ಇದೆ ಎಂದೇ ಮರ್ಯಾದೆ ಕೊಟ್ಟು ಮನೆಗೆ ಕಳುಹಿಸಿದ್ದಾರೆ. ಕಾಂಗ್ರೆಸ್‌ಗೆ 136 ಸ್ಥಾನಗಳಲ್ಲಿ ಆಯ್ಕೆ ಮಾಡಿ ಕಳುಹಿಸಿದ್ದಾರೆ. ಪಕ್ಷ ಮುನಿಯಪ್ಪ ಅವರ ಕೈಯಲ್ಲಿ ಇಲ್ಲ.

ಪಕ್ಷದ ಹೈಕಮಾಂಡ್ ಕೈಯಲ್ಲಿದೆ. ಹೀಗಾಗಿ ಪಕ್ಷದ ವರಿಷ್ಠರ ತೀರ್ಮಾನವೇ ಅಂತಿಮ ಎಂದರು.

ಮಧ್ಯಪ್ರದೇಶದಲ್ಲಿ ಗ್ಯಾರಂಟಿ ಘೋಷಣೆ ವಿಚಾರವಾಗಿ ಪ್ರತಿಕ್ರಿಯೆ ನೀಡಿದ ಎಂ.ಬಿ ಪಾಟೀಲ್, ರೈತರ ಸಾಲ ಮನ್ನಾ ಮಾಡಿದರೆ ತಪ್ಪೇನಿದೆ? ಮನಮೋಹನ್ ಸಿಂಗ್ ಅವರ ಅವಧಿಯಲ್ಲಿ ದೇಶದ 72 ಸಾವಿರ ರೈತರ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿನ ಸಾಲಮನ್ನಾ ಮಾಡಿದ್ದೇವೆ. ರಾಜ್ಯದಲ್ಲಿಯೂ ರೈತರ ಸಾಲಮನ್ನಾ ಮಾಡಿದ್ದೇವೆ.

ಪ್ರಧಾನಿ ಮೋದಿಯವರು ದೊಡ್ಡ ಮಟ್ಟದಲ್ಲಿ ಅದಾನಿ, ಅಂಬಾನಿಯಂತಹ ಉದ್ಯಮಿಗಳ ಸಾಲ ಮನ್ನಾ ಮಾಡಿದ್ದಾರೆ. ನಾವು ರೈತರ ಸಾಲ ಮನ್ನಾ ಮಾಡಿದರೆ ತಪ್ಪಾ? ಎಂದು ಕುಹಕವಾಡಿದರು. ಈ ಸಂದರ್ಭದಲ್ಲಿ ರೋಣ ಶಾಸಕ ಜಿ.ಎಸ್. ಪಾಟೀಲ, ಕಾಂಗ್ರೆಸ್ ಮುಖಂಡರಾದ ಬಿ.ಬಿ.ಅಸೂಟಿ, ವಿನೋದ ಶಿದ್ಲಿಂಗ್, ಅನಿಲ ಗರಗ ಸೇರಿದಂತೆ ಇತರರು ಇದ್ದರು.

### ಪ್ರಭಾರಿ ಕಂದಾಯ ನಿರೀಕ್ಷಕರಿಂದ ಸಮುದಾಯದವರಿಗೆ ಜಾತಿ ನಿಂದನೆ

# ಅಧಿಕಾರಿಯ ವಿರುದ್ಧ ಶಿಸ್ತು ಕ್ರಮಕ್ಕೆ ಆಗ್ರಹ



■ ವಿಜಯಸಾಕ್ಷಿ ಸುದ್ದಿ, ಶಿರಹಟ್ಟಿ

ಸರಕಾರ ಶಿರಹಟ್ಟಿ ಮತಕ್ಷೇತ್ರದಲ್ಲಿಯ ಎಸ್‌ಸಿ ಸಮುದಾಯದ ಶ್ರೇಯೋಭಿವೃದ್ಧಿಗಾಗಿ ಮತಕ್ಷೇತ್ರವನ್ನೇ ಮೀಸಲಿರಿಸಿದೆ. ಆದರೆ ಇಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳು ಇದನ್ನು ಪರಿಗಣಿಸದೇ ಸಮುದಾಯದವರಿಗೆ ಪ್ರಮಾಣಪತ್ರ ನೀಡಲು ಅನ್ಯಾಯ ಮಾಡಿ ಅವಮಾನಿಸಿದ್ದಾರೆ ಎಂದು ಜಿಲ್ಲಾ ಎಸ್‌ಸಿ/ಎಸ್‌ಟಿ ದೌರ್ಜನ್ಯ ನಿಯಂತ್ರಣ ಮೇಲುಸ್ತುವಾರಿ ಸಮಿತಿಯ ನಾಮನಿರ್ದೇಶಿತ ಸದಸ್ಯ ಜಾನು ಲಮಾಣಿ ಆಕ್ರೋಶ ವ್ಯಕ್ತಪಡಿಸಿದರು.

ಎಸ್‌ಸಿ ಪ್ರಮಾಣಪತ್ರ ಪಡೆಯಲು ಹೋದಾಗ ಶಿರಹಟ್ಟಿಯ ತಹಸೀಲ್ದಾರ ಕಚೇರಿಯಲ್ಲಿ ಪ್ರಭಾರಿ ಕಂದಾಯ ನಿರೀಕ್ಷಕರು ಸಮುದಾಯದವರಿಗೆ ಜಾತಿ ನಿಂದನೆ ಮಾಡಿದ್ದಕ್ಕೆ ಶಿಸ್ತು ಕ್ರಮಕ್ಕೆ ಒತ್ತಾಯಿಸಿ ಬುಧವಾರ ತಹಸೀಲ್ದಾರರಿಗೆ ಮನವಿ ಸಲ್ಲಿಸಿ ಮಾತನಾಡಿದರು.

ಛಬ್ಬಿ ಗ್ರಾಮದ ತಿಪ್ಪಣ್ಣ ಲಮಾಣಿ ಎಂಬಾತ ಎಸ್‌ಸಿ/ಎಸ್‌ಟಿ ಕಾರ್ಪೋರೇಶನ್‌ಗೆ ಪಿಟಿಸಿಎಲ್ ಫೈಲ್ ಕುರಿತು ಮಾಹಿತಿ ಕೇಳಲು ಹೋದಾಗ, ಪ್ರಭಾರಿ ಕಂದಾಯ ನಿರೀಕ್ಷಕರು ಅಸಭ್ಯವಾಗಿ ವರ್ತಿಸಿ, ಜಾತಿ ಎತ್ತಿ ನಿನ್ನ ಜಾತಿ ಯಾವುದೆಂದು ಆತನಿಗೆ ಕೇಳಿದಾಗ ಎಸ್‌ಸಿ ಜಾತಿಯವನೆಂದು ಹೇಳಿದ್ದಾನೆ. ಪುನಃ ಅವನಿಗೆ ಎಸ್‌ಸಿಯಲ್ಲಿ ಜಾತಿ ಯಾವುದು ಎಂದು ಕೇಳಿದಾಗ ಆತ ಲಮಾಣಿ ಎಂದು ಹೇಳಿದ್ದಾನೆ. ಇದಕ್ಕೆ ಕಂದಾಯ ನಿರೀಕ್ಷಕರು, ಶಿರಸ್ತೇದಾರರನ್ನು ಭೇಟಿಯಾಗಿ ಬಂದ ನಂತರ ಮುಂದಿನ ವಿಷಯ ತೆಗೆದುಕೊಳ್ಳುತ್ತೇನೆಂದು ಹಾರಿಕೆ ಉತ್ತರ ನೀಡಿ, ಜಾತಿ ನಿಂದನೆ ಮಾಡಿದ್ದಾರೆ. ಈ ಕೂಡಲೇ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಮನವಿ ಸ್ವೀಕರಿಸಿ ಮಾತನಾಡಿದ ತಹಸೀಲ್ದಾರ ಅನಿಲ ಬಡಿಗೇರ, ಈ ವಿಷಯಕ್ಕೆ ಸಂಬಂಧಿಸಿದಂತೆ ನನ್ನ ಹಂತದಲ್ಲಿ ಶೀಘ್ರವೇ ವಿಚಾರಣೆ ಮಾಡುತ್ತೇನೆ. ಬೇರೆ ಕಂದಾಯ ನಿರೀಕ್ಷಕರನ್ನು ನಿಯೋಜಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದ್ದೇನೆ. ಅಟಲ್‌ಜೀ ಕೇಂದ್ರದಲ್ಲಿಯ ಸಿಬ್ಬಂದಿಗಳ ಸಭೆ ಕರೆದು ಅವರಿಗೂ ಸಹ ಕಟ್ಟುನಿಟ್ಟಿನ ಎಚ್ಚರಿಕೆ ನೀಡುತ್ತೇನೆ ಎಂದರು.

ಈ ಸಂದರ್ಭದಲ್ಲಿ ಬಸವರಾಜ ಪಲ್ಲೇದ, ಪ್ರವೀಣಗೌಡ ಪಾಟೀಲ, ರಾಜೀವರೆಡ್ಡಿ ಬಮ್ಮನಕಟ್ಟಿ, ಹೇಮಂತ ಕೆಂಗೊಂಡ, ತಿಪ್ಪಣ್ಣ ಲಮಾಣಿ, ಶಿವು ಲಮಾಣಿ, ಎಂ.ಎಸ್ ಅಡರಕಟ್ಟಿ, ಆರ್.ವಿ ತೋಟದ, ಕೆ.ವಿ ಅಂಗಡಿ, ಎಂ.ಪಿ ಪೂಜಾರ, ಎಂ.ಎಸ್ ಲಮಾಣಿ ಮುಂತಾದವರು ಉಪಸ್ಥಿತರಿದ್ದರು.

> ಶಿರಹಟ್ಟಿಯ ತಹಸೀಲ್ದಾರ ಕಚೇರಿಯ ಸುತ್ತಮುತ್ತಲೂ ಇತ್ತೀಚಿನ ದಿನಗಳಲ್ಲಿ ಏಜೆಂಟರ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ಸಾಮಾಜಿಕ ಭದ್ರತೆ ಯೋಜನೆಯಡಿ ಮಂಜೂರಾತಿ ಆದೇಶ ಪತ್ರ ನೀಡಲು ಅಟಲ್‌ಜೀ ಕೇಂದ್ರದಲ್ಲಿ ಸಿಬ್ಬಂದಿಗಳು 1 ಸಾವಿರ ರೂ. ಪಡೆದುಕೊಂಡಿದ್ದು ನನ್ನ ಗಮನಕ್ಕೆ ಬಂದಿದೆ. ಸಮುದಾಯದವರಿಗೆ ಅಧಿಕಾರಿಗಳು ಸೂಕ್ತವಾಗಿ ಸ್ಪಂದಿಸುತ್ತಿಲ್ಲ. ಇಲ್ಲಿ ಅಧಿಕಾರಿಗಳು ಯಾರು, ಏಜೆಂಟರು ಯಾರು ಎಂಬುದೂ ತಿಳಿಯುತ್ತಿಲ್ಲ. ಸಮಯಕ್ಕೆ ಸರಿಯಾಗಿ ಕಚೇರಿಗೆ ಹಾಜರಾಗುವದಿಲ್ಲ. ಅವಧಿಗೂ ಮುನ್ನವೇ ಮನೆಗೆ ಹೋಗುವುದು ಇಲ್ಲಿ ಸಾಮಾನ್ಯವಾಗಿದೆ. ಈ ಎಲ್ಲ ಅಂಶಗಳನ್ನು ಜಿಲ್ಲಾಧಿಕಾರಿಗಳ ಗಮನಕ್ಕೂ ತರಲಾಗುವುದು ಎಂದು ಜಾನು ಲಮಾಣಿ ಹೇಳಿದರು.

# ಬಳಕೆಗಿಂತ ಹೆಚ್ಚಿನ ನೀರನ್ನು ಇಂಗಿಸಿ

▶▶ ಮೊದಲನೇ ಪುಟದಿಂದ

ಸಭಾ ಭವನದಲ್ಲಿ ಹಮ್ಮಿಕೊಂಡಿದ್ದ ಒಂದು ದಿನದ ಜಿಲ್ಲಾ ಮಟ್ಟದ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರರು.

ಗದಗ ಜಿಲ್ಲಾ ಅಂತರ್ಜಲ ಕಛೇರಿಯ ಹಿರಿಯ ಭೂವಿಜ್ಞಾನಿ ಸಂತೋಷ ಸಿ.ಪ್ಯಾಟಿಗಾಣಿಗೇರ್ ಅಟಲ್ ಭೂಜಲ ಯೋಜನೆಯ ಗ್ರಾಮ ಪಂಚಾಯತವಾರು ಈಗಿರುವ ಅಂತರ್ಜಲ ಮಟ್ಟದ ಬಗ್ಗೆ ಹಾಗೂ ನೀರಿನ ವಿಶ್ಲೇಷಣೆ, ಗುಣಮಟ್ಟದ ಮತ್ತು ನೀರಿನ ಅಳೆಯುವ ಮಾಪನದ ಬಗ್ಗೆ ತಿಳಿಸಿದರು. ಹಿರಿಯ ರಾಸಾಯನ ಶಾಸ್ತ್ರಜ್ಞ, ಆರ್‌ಡಿಡಬ್ಲ್ಯೂಎಸ್‌ಪಿ ಶಿವಾನಂದ ಶ್ಯಾನಭೋಗರ್ ಅಂತರ್ಜಲದ ಗುಣಮಟ್ಟ, ಗಡಸುತನ, ಅನುಕೂಲ ಹಾಗೂ ಅನಾನೂಕೂಲದ ಬಗ್ಗೆ ಮಾಹಿತಿಯನ್ನು ಹಂಚಿಕೊಂಡರು.

ಕಾರ್ಯಾಗಾರದಲ್ಲಿ ಅಟಲ್ ಭೂಜಲ ಯೋಜನೆಯ ಅಂತರ್ಜಲ ತಜ್ಞರಾದ ದಿನೇಶ ಎಚ್. ಪಾಟೀಲ್, ಕೃಷಿ ತಜ್ಞರಾದ ಶಿವಕುಮಾರ ಟಿ.ಎಚ್, ಮಾಹಿತಿ ಮತ್ತು ಶಿಕ್ಷಣ ಸಂವಹನ ತಜ್ಞರಾದ ಕೋಟ್ರೇಶ ಎಚ್.ಎಮ್ ಮತ್ತು ಜೀವನ ಬೆಳಕು ಕಲಾ ತಂಡದ ನಾಯಕರಾದ ರಾಜಶೇಖರ್ ಹಿರೇಮಠ ಹಾಗೂ ಸಂಗಡಿಗರು, ಅಟಲ್ ಭೂಜಲ ಯೋಜನೆಯ ಜಿಲ್ಲಾ ಪಾಲುದಾರ ಸಂಸ್ಥೆಯಾದ ಧಾರವಾಡದ ನಿವೇದಿತಾ ಮಹಿಳಾ ವಿವಿಧೋದ್ದೇಶ ಸಂಘದ ಸಿಬ್ಬಂದಿಗಳು ಹಾಜರಿದ್ದರು.

# ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ವಿತರಣೆ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆಯ ಪೌರಾಯುಕ್ತರು ಹಾಗೂ ಪಟ್ಟಣ ಮಾರಾಟ ಸಮಿತಿ ಅಧ್ಯಕ್ಷ ರಮೇಶ ಸುಣಗಾರ ಬೀದಿ ಬದಿ ವ್ಯಾಪಾರಸ್ಥರಿಗೆ ಗುರುತಿನಿ ಚೀಟಿ ವಿತರಿಸಿದರು.

ಈ ಸಂದರ್ಭದಲ್ಲಿ ಪೌರಾಯುಕ್ತರು ಮಾತಾನಾಡಿ, ಎಲ್ಲ ಬೀದಿ ಬದಿ ವ್ಯಾಪಾರಿಗಳೆಲ್ಲರೂ ಗುರುತಿನ ಚೀಟಿ ಪಡೆದು, ಪಿಎಮ್ ಸ್ವನಿಧಿ ಯೋಜನೆಯ ಸದುಪಯೋಗ ಪಡೆದುಕೊಳ್ಳಬೇಕು ಎಂದರು. ಕಾರ್ಯಕ್ರಮದಲ್ಲಿ ಸಮುದಾಯ ಸಂಘಟನಾಧಿಕಾರಿ ಶೋಭಾ ಬೆಳ್ಳಿಕೊಪ್ಪ, ಸಂಕನಗೌಡ್ರ, ಬೀದಿ ಬದಿ ವ್ಯಾಪಾರಸ್ಥರ ಸಂಘದ ಪದಾಧಿಕಾರಿಗಳು, ನಗರಸಭೆ ಸದಸ್ಯರಾದ ಅನಿಲ ಸಿದ್ದಮನಹಳ್ಳಿ, ಅಶೋಕ ಮಂದಾಲಿ, ಬಸವರಾಜ ಕಡೆಮನಿ, ಸಂಘದ ಜಿಲ್ಲಾಧ್ಯಕ್ಷ ಮಕ್ತುಮಸಾಬ ನಾಲಬಂದ ಮುಂತಾದವರು ಉಪಸ್ಥಿತರಿದ್ದರು.

ಬಾಷಾಸಾಬ ಮಲ್ಲಸಮುದ್ರ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

# ವಿಶೇಷ ಚೇತನರನ್ನು ಮುಖ್ಯವಾಹಿನಿಗೆ ತನ್ನಿ




■ ವಿಜಯಸಾಕ್ಷಿ ಸುದ್ದಿ, ಗದಗ

ವಿಶೇಷ ಚೇತನ ಮಕ್ಕಳಲ್ಲಿಯ ಸುಪ್ತ ಪ್ರತಿಭೆಗೆ ಅವಕಾಶಗಳನ್ನು ನೀಡಿ, ಅವರನ್ನು ಮುಖ್ಯವಾಹಿನಿಗೆ ತರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಗದಗ ಶಹರ ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ ಹೇಳಿದರು.

ಅವರು ಮಂಗಳವಾರ ಗದಗ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಎಸ್‌ಆರ್‌ಪಿ ಸೆಂಟರ್‌ದಲ್ಲಿ ಪೂರ್ಥ್‌ವೇ ಪೌಂಡೇಶನ್‌ನ ಕಾರ್ಯಚಟುವಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದರು.

ಮಕ್ಕಳು ಅಂಗವಿಕಲರಾದಲ್ಲಿ ಪಾಲಕರು ನೊಂದುಕೊಳ್ಳದೆ, ಅವರಲ್ಲಿ ಆತ್ಮವಿಶ್ವಾಸವನ್ನು ತುಂಬಿ ಅವರ ಸ್ವಾವಲಂಬಿ ಬದುಕಿಗೆ ಪ್ರೇರೆಪಿಸಬೇಕೆಂದರು.


ಪೂರ್ಥ್‌ವೇ ಪೌಂಡೇಶನ್‌ನ ಮುಖ್ಯಸ್ಥ ಬಸವರಾಜ ಮ್ಯಾಗೇರಿ ಮಾತನಾಡಿ, ಅಂಗವಿಕಲತೆ ಎಂಬುದು ಶಾಪವಲ್ಲ. ಅವರಲ್ಲಿ ಪ್ರೀತಿ ತುಂಬಿ ಎಲ್ಲರಂತೆ ನನಗೂ ಶಾಲೆ ಎಂಬ ಭಾವನೆ ಬರುವಂತೆ ಮಾಡಬೇಕೆಂದರು.

ಪ್ರಾಸ್ತಾವಿಕವಾಗಿ ಎಸ್‌ಆರ್‌ಪಿ ಸೆಂಟರ್‌ನ ಮುಖ್ಯೋಪಾಧ್ಯಾಯೆ ವ್ಹಿ.ಡಿ ಹುಗ್ಗೆಣ್ಣವರ ಮಾತನಾಡಿ, ವಿಶೇಷ ಚೇತನ ಮಕ್ಕಳಿಗೆ ಸರಕಾರದಿಂದ ಸಿಗುವ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ ಎಂದರು.

ವೇದಿಕೆಯ ಮೇಲೆ ಪೂರ್ಥ್‌ವೇ ಪೌಂಡೇಶನ್‌ನ ವ್ಹಿ.ಸಿ ಗಂಧ, ಸಮನ್ವಯಾಧಿಕಾರಿ ಘಾರೂಕಿ, ಡಾ.ಶಿವನಗೌಡ್ರ ಉಪಸ್ಥಿತರಿದ್ದರು.

ಸಂಪನ್ಮೂಲ ವ್ಯಕ್ತಿಗಳಾದ ಕೆ.ಎಸ್ ಬೇಲೇರಿ ಸ್ವಾಗತಿಸಿದರು. ಶಶಿಧರ ಚಳಗೇರಿ ನಿರೂಪಿಸಿದರು. ಸುನೀತಾ ತಿಮ್ಮನಗೌಡ್ರ ಪರಿಚಯಿಸಿದರು. ಶ್ರೀಮತಿ ಕಟಗಿ ವಂದಿಸಿದರು.

# ಇಡೀ ವಿಶ್ವವೇ ಭಾರತದ ಬಗ್ಗೆ ಹೆಮ್ಮೆ ಪಡುತ್ತಿದೆ



■ ವಿಜಯಸಾಕ್ಷಿ ಸುದ್ದಿ, ಗದಗ

ವಿಶ್ವವೇ ಎದುರುನೋಡುತ್ತಿದ್ದ ಚಂದ್ರಯಾನ-3 ಯಶಸ್ಸಿನಿಂದ ಭಾರತದ ಬಗ್ಗೆ ವಿಶ್ವವೇ ಹೆಮ್ಮೆ ಪಡುತ್ತಿದೆ. ಚಂದ್ರನ ದಕ್ಷಿಣ ಭಾಗದಲ್ಲಿ ಉಪಗ್ರಹವನ್ನು ಯಶಸ್ವಿಯಾಗಿ ಇಳಿಸಿ, ಹೊಸ ಸಂಶೋಧನೆಗೆ ನಾಂದಿ ಹಾಡಿದ ಮೊದಲ ದೇಶ ಭಾರತವೆನ್ನಲು ಹೆಮ್ಮೆಯಾಗುತ್ತದೆ. ಹಿಂದಿನ ವೈಫಲ್ಯವನ್ನು ಸವಾಲಾಗಿ ಸ್ವೀಕರಿಸಿ, ಅದನ್ನು ಮೆಟ್ಟಿ ಚಂದ್ರಯಾನ-3 ಯಶಸ್ವಿಯಾಗಿರುವುದು ನಮ್ಮೆಲ್ಲರಿಗೆ ಪ್ರೇರಣೆ ಹಾಗೂ ಅಹೆಮ್ಮೆಯ ಸಂಗತಿ ಎಂದು ಯಂಗ್ ಇಂಡಿಯಾ ಪರಿವಾರದ ಅಧ್ಯಕ್ಷ ವೆಂಕನಗೌಡ ಆರ್.ಗೋವಿಂದಗೌಡ್ರ ಹೆಮ್ಮೆ ವ್ಯಕ್ತಪಡಿಸಿದ್ದಾರೆ.

ಈ ಯಶಸ್ಸಿಗಾಗಿ ಶ್ರಮಿಸಿದ ಎಲ್ಲ ವಿಜ್ಞಾನಿಗಳಿಗೆ, ಇಸ್ರೋ ಸಿಬ್ಬಂದಿಗಳಿಗೆ ವೆಂಕನಗೌಡ ಆರ್. ಗೋವಿಂದಗೌಡ್ರ, ಶಂಕರ ಗೋಕಾವಿ, ಹನಮಂತ ಕೊಳಗನವರ, ಅಮರೇಶ ಅಂಗಡಿ, ಕುಮಾರ ಜಿಗಳೂರ, ಚಂದ್ರು ಸಂಕನಗೌಡರ, ಶರಣಪ್ಪ ಹಗ್ಗದ, ಮುತ್ತು ಬೆನ್ನಾಳ, ಶ್ರೀಕಾಂತ, ಬೆಟಗೇರಿ, ರಫೀಕ ಜಮಾಲಖಾನ, ಇಲಿಯಾಸ ಖೈರಾತಿ, ರವಿ ಕರಬಸಣ್ಣವರ, ಮುತ್ತಣಾ ಅಂಗಡಿ, ಯಲ್ಲಪ್ಪ ಭರಮಗೌಡ್ರ, ಮುಷ್ಠಿಗೇರಿ, ಜೋಶಿ ಪರದೇಶಿ, ಬಸವರಾಜ ಅಡ್ನೂರ, ಶ್ರೀನಿವಾಸ ಖೋಡೆ ಅಭಿನಂದಿಸಿದ್ದಾರೆ.

### ವಚನ ಶ್ರಾವಣದ 6ನೇ ದಿನದ ಕಾರ್ಯಕ್ರಮದಲ್ಲಿ ವಿಶಾಲಾಕ್ಷಿ ಕಲ್ಲನಗೌಡರ

# ವಚನಗಳು ಮನದ ಭಕ್ತಿಗೆ ದಿವ್ಯ ಶಕ್ತಿ



■ ವಿಜಯಸಾಕ್ಷಿ ಸುದ್ದಿ, ಗದಗ

12ನೇ ಶತಮಾನದಲ್ಲಿ ಮಹಾತ್ಮ ಬಸವಣ್ಣನವರ ಸಮಕಾಲೀನ ಶರಣರು ಮತ್ತು ಶರಣೆಯರು ತಮ್ಮ ಅನುಭವದ ಮೂಲಕ ವಚನಗಳನ್ನು ಬರೆಯುತ್ತ, ಸಮಾಜದ ಅಂಕುಡೊಂಕುಗಳನ್ನು ತಿದ್ದಿ ತೀಡಿದರು. ಶರಣರ ವಚನಗಳು ಸಮಾಜಕ್ಕೆ, ಈ ಬದುಕಿಗೆ, ಮನದ ಭಕ್ತಿಗೆ ಒಂದು ದಿವ್ಯ ಶಕ್ತಿಯಾಗಿದ್ದವು. ಅಂದು ಹಲವಾರು ಶರಣರು ಬರೆದ ವಚನಗಳು ಇಂದಿಗೂ ಸಹ ಸಮಾಜಕ್ಕೆ ಮಾದರಿಯಾಗಿದೆ ಎಂದು ಶರಣೆ ವಿಶಾಲಾಕ್ಷಿ ಆರ್. ಕಲ್ಲನಗೌಡರ ಅಭಿಪ್ರಾಯಪಟ್ಟರು.

ಇಲ್ಲಿನ ಶಹಪುರಪೇಟೆಯ ಬಸವೇಶ್ವರ ನಗರದ ಶರಣ ಪ್ರಭಣ್ಣ ಶಂಕರ ತಡಸದ ಅವರ ನಿವಾಸದಲ್ಲಿ ನಡೆದ ವಚನ ಶ್ರಾವಣದ 6ನೇ ದಿನದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಯಾವುದೇ ಸದ್ದು-ಗದ್ದಲವಿಲ್ಲದೆ ಪ್ರಾಮಾಣಿಕತೆಯಿಂದ ಕಾರ್ಯಕ್ರಮವನ್ನು ಮಾಡುತ್ತಿರುವ ಗದುಗಿನ ಬಸವದಳ, ಬಸವ ಕೇಂದ್ರ ಹಾಗೂ ಲಿಂಗಾಯತ ಪ್ರಗತಿಶೀಲ ಸಂಘದ ಈ ಕಾರ್ಯಕ್ರಮ ಅನುಪಮವಾದುದು ಎಂದು ಮೆಚ್ಚುಗೆಯ ನುಡಿಗಳನ್ನಾಡಿದರು.

ಉರಿಲಿಂಗಪೆದ್ದಿ ಶರಣರ ವಚನದ ಕುರಿತು ಹಿರಿಯ ಅನುಭವಿಗಳಾದ ಶರಣ ಶಿವಣ್ಣ ಮುಗದ ಅವರು ಮಾತನಾಡಿದರು. ಅನ್ನಪೂರ್ಣಕ್ಕ, ರೇಣುಕಾ ಕರಿಗೌಡ್ರು, ಗಂಗಮ್ಮ ಹೂಗಾರ, ಸುಲೋಚನ ಹಂಚಿನಾಳ, ಮಂಗಳಕ್ಕ ಕಾಮಣ್ಣವರ, ಗೌರಕ್ಕ ಬಡಿಗಣ್ಣವರ, ಸಹನಾ ಆಲತಗಿ, ಗಿರಿಜಾ ಹಿರೇಮಠ, ಸೀಮಾ ಗಡಾದ, ಕಮಲಾ ತಡಸದ, ಮಂಜುಳಾ ಹಾಸಲಕರ, ವೀಣಾ ತಡಸದ, ಪ್ರವೀಣ ಸಾಲಿಮಠ, ಪ್ರಕಾಶ್ ಅಸುಂಡಿ, ಶಿವಣ್ಣ ಮುಗದ, ವಿ.ಕೆ ಕರಿಗೌಡ್ರು, ಅಶೋಕ ಬಂಡೆಪ್ಪನವರ, ಮಹಾಂತೇಶ ಅಂಗಡಿ, ಕಿಲಬನವರ, ಸೋಮಶೇಖರ ಪುರಾಣಿಕ, ರಾಮಣ್ಣ ಕಳ್ಳಿಮನಿ, ಕೆ.ವಿ ಗೋಣಿ, ಚನ್ನಬಸಪ್ಪ ಅಂಗಡಿ, ಸಿ.ಆರ್ ಗಡಾದ, ಎನ್. ಎಚ್ ಹಿರೇಸಕ್ಕರಗೌಡರ, ತಡಸದ ಪರಿವಾರದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಮಂಗಳಕ್ಕ ಕಾಮಣ್ಣವರ ವಚನ ಪ್ರಾರ್ಥನೆ ಹಾಡಿದರು. ಪ್ರಭು ತಡಸದ ಸ್ವಾಗತಿಸಿದರು. ಗಂಗಮ್ಮ ಹೂಗಾರ ನಿರೂಪಿಸಿದರು.

# ಚಂದ್ರಯಾನ-3ರ ಐತಿಹಾಸಿಕ ಸಾಧನೆಯನ್ನು ಕಣ್ತುಂಬಿಕೊಂಡ ಚಿಣ್ಣರು




■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಪಟ್ಟಣದ ಸ್ಕೂಲ್ ಚಂದನದ ವಿದ್ಯಾರ್ಥಿಗಳು ಚಂದ್ರಯಾನ-3 ವಿಕ್ರಮದ ಐತಿಹಾಸಿಕ ಸಾಧನೆಯ ಕ್ಷಣವನ್ನು ಕಣ್ತುಂಕೊಂಡು ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

ಶಾಲೆಯ ಭಾರತರತ್ನ ಸಿಎನ್‌ಆರ್ ರಾವ್ ಸೈನ್ಸ್ ಹಾಲ್‌ನಲ್ಲಿ ಚಂದ್ರಯಾನ-3ರ ದೃಶ್ಯವನ್ನು ವೀಕ್ಷಿಸಲು ಸಕಲ ಸಿದ್ಧತೆಯನ್ನು ಮಾಡಲಾಗಿತ್ತು. ವಿಕ್ರಮ ಲ್ಯಾಂಡರ್ ಚಂದ್ರನ ಮೇಲೆ ಸರಿಯಾದ ಸಮಯಕ್ಕೆ ಲ್ಯಾಂಡಿಂಗ್ ಆಗುತ್ತಿದ್ದಂತೆ ಮಕ್ಕಳ ಕೇಕೆ, ಚಪ್ಪಾಳೆ, ಸಿಳ್ಳೆಗಳ ಸಂಭ್ರಮ ಚಂದ್ರನಲ್ಲಿಗೇ ಮುಟ್ಟುವಂತಿತ್ತು.

ಸ್ಕೂಲ್ ಚಂದನದ ಸಂಸ್ಥಾಪಕ ಅಧ್ಯಕ್ಷ ಟಿ.ಈಶ್ವರ್ ಮಾತನಾಡಿ, ಭಾರತರತ್ನ ಸಿಎನ್‌ಆರ್ ರಾವ್ ಮತ್ತು ಇಂದುಮತಿ ರಾವ್, ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್ ಕಿರಣಕುಮಾರ ಸೇರಿ ಇಸ್ರೋದ ಅನೇಕ ವಿಜ್ಞಾನಿಗಳಿಗೂ ಚಂದನ ಶಾಲೆಗೂ ಅವಿನಾಭಾವ ಸಂಬಂಧವಿದೆ. ಅನೇಕ ಬಾರಿ ಶಾಲೆಯ ಮಕ್ಕಳೊಂದಿಗೆ ಚಂದನ-ಸ್ಪಂದನ ಸಂವಾದದಲ್ಲಿ ಮಾತನಾಡಿದ್ದರು ಎಂದರು. ಶೀಘ್ರದಲ್ಲಿಯೇ ಈ ಯಾನದ ಸಾಧನೆಗೆ ಕಾರಣರಾದ ಇಸ್ರೋದ ವಿಜ್ಞಾನಿಗಳು ಚಂದನ ಶಾಲೆಗೆ ಭೇಟಿ ನೀಡಲಿದ್ದು, ಚಂದನದ ಬಾಲ ವಿಜ್ಞಾನಿಗಳು ಇಸ್ರೋ ವಿಜ್ಞಾನಿಗಳನ್ನು ಅಭಿನಂದಿಸಲಿದ್ದಾರೆ. ಚಂದನ ಶಾಲೆಯಲ್ಲಿ ಮತ್ತೊಂದು ವಿಜ್ಞಾನದ ಮಹತ್ವದ ಕಾರ್ಯಕ್ರಮ ಶ್ರೇಷ್ಠ ವಿಜ್ಞಾನಿಗಳ ಸಮ್ಮುಖದಲ್ಲಿ ನೆರವೇರಲಿದೆ ಎಂದು ಹೇಳಿದರು.

ನಿರ್ದೇಶಕ ಎಚ್.ಸಿ ರಟಗೇರಿ, ಪ್ರಾಚಾರ್ಯ ರಾಮು ಹಾಗೂ ಶಿಕ್ಷಕವೃಂದದವರು ಇದ್ದರು.



ಲಕ್ಷ್ಮೇಶ್ವರ ತಾಲೂಕಿನ ಒಡೆಯರ ಮಲ್ಲಾಪುರದ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ವಿದ್ಯಾರ್ಥಿಗಳು ಚಂದ್ರಯಾನ-3 ವಿಕ್ರಂ ಲ್ಯಾಂಡರ್ ಚಂದ್ರನ ಅಂಗಳದಲ್ಲಿ ಯಶಸ್ವಿಯಾಗಿ ಇಳಿದ ಕ್ಷಣವನ್ನು ಕಣ್ತುಂಬಿಕೊಂಡು ಸಂಭ್ರಮಿಸಿದರು. ಈ ವೇಳೆ ಪ್ರಾಚಾರ್ಯ ಡಿ.ಸಿ ನರೇಗಲ್, ಎಂ.ಆಯ್ ಡಂಬಳ, ರೂಪಾ ಮನ್ನಂಗಿ, ಸಿ.ಎಸ್ ನಾವಿ, ಮುಕ್ತಾ ಆದಿ, ಎಸ್.ಎ ಬೆಟಗೇರಿ, ಸುನೀಲ ತಳ್ಳಳ್ಳಿ, ಎಸ್.ಎ ಮುಲ್ಲಾ, ಸೀಮಾ ಮಾಡಳ್ಳಿ, ಎಸ್.ಕೆ ನಧಾಪ್, ಎ.ಎಚ್ ರಾಠೋಡ, ಎಫ್.ಸಿ ಹಮಸಾಗರ, ಪ್ರವೀಣ ಗಾಯಕರ, ಎ.ಎ ವಠಾರ, ಪಾಟೀಲ, ಪ್ರವೀಣ ಕಡೇಲ್, ಲಕ್ಷ್ಮೀ ಡೊಳ್ಳಿನ ಸೇರಿ ಹಲವರಿದ್ದರು.

### ಜಿಲ್ಲಾ ಆರೋಗ್ಯ-ಕುಟುಂಬ ಇಲಾಖೆಯ ನೂತನ ಅಧಿಕಾರಿಗಳಿಗೆ ಸನ್ಮಾನ ಕಾರ್ಯಕ್ರಮ

# ಬಡವರ ಸೇವೆಯೊಂದಿಗೆ ಜವಾಬ್ದಾರಿ ನಿಭಾಯಿಸೋಣ



■ ವಿಜಯಸಾಕ್ಷಿ ಸುದ್ದಿ, ಗದಗ

ವಿಡಿಎಸ್‌ಟಿಸಿಯ 1984-85ನೇ ಸಾಲಿನ ವಿದ್ಯಾರ್ಥಿಯಾಗಿದ್ದ ಡಾ. ಶಿವಪ್ರಕಾಶ ಎಸ್. ನೀಲಗುಂದವರು ನೂತನವಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾಗಿ ಹಾಗೂ ದತ್ತಾತ್ರೇಯ ತ್ರಿಮಲ್ಲೇಯವರು ಜಿಲ್ಲಾ ಹಿರಿಯ ಫಾರ್ಮಸಿ ಅಧಿಕಾರಿಳಾಗಿ ಅಧಿಕಾರ ಸ್ವೀಕರಿಸಿದ ನಿಮಿತ್ತ 1984-85ನೇ ಸಾಲಿನ ವಿಡಿಎಸ್‌ಟಿಸಿ ವಿದ್ಯಾರ್ಥಿಗಳ ಬಳಗದಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ಮಧು ಪುಣೇಕರವರು ಮಾತನಾಡಿ, ಸಾಮಾಜಿಕ ಕಳಕಳಿ, ಸೇವಾ ಮನೋಭಾವ ಹೊಂದಿದ ಡಾ. ನೀಲಗುಂದರು ಆರೋಗ್ಯ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಾ, ಹಲವಾರು ಹುದ್ದೆಗಳನ್ನು ಅಲಂಕರಿಸಿ, ಈಗ ಜಿಲ್ಲಾ ಮಟ್ಟದ ಅಧಿಕಾರಿಯಾಗಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಇವರ ಅಧಿಕಾರಾವಧಿಯಲ್ಲಿ ಜಿಲ್ಲೆಯಲ್ಲಿ ಆರೋಗ್ಯಕ್ಕೆ ಸಂಬಂಧಪಟ್ಟಂತೆ ಅಭಿವೃದ್ಧಿ ಕಾರ್ಯಗಳಾಗಲೆಂದು ಶುಭ ಹಾರೈಸಿದರು.

ವಾಸ್ತು ತಜ್ಞ ಡಾ. ಶೈಲೇಂದ್ರ ಶೆಂಬೇಕರ ತಮ್ಮ ಅನುಭವಗಳನ್ನು ಮೆಲಕು ಹಾಕುತ್ತಾ, ನೊಂದವರ ಕಣ್ಣೊರೆಸುವ ಕೆಲಸವನ್ನು ನಮ್ಮ ಕರ್ತವ್ಯವೆಂದು ಮಾಡೋಣ. ನಾವೆಲ್ಲರೂ ನಮ್ಮ ನಮ್ಮ ಕ್ಷೇತ್ರದಲ್ಲಿ ನೊಂದವರಿಗೆ ಹಾಗೂ ಬಡವರಿಗೆ ಉಚಿತವಾಗಿ ಸೇವೆ ಮಾಡುತ್ತಾ ನಮ್ಮ ಜವಾಬ್ದಾರಿಯನ್ನು ನಿಭಾಯಿಸೋಣ. ಆರೋಗ್ಯ ಇಲಾಖೆಯಲ್ಲಿ ಜಿಲ್ಲಾ ಮಟ್ಟದ ಜವಾಬ್ದಾರಿಯುತ ಹುದ್ದೆಯನ್ನು ಅಲಂಕರಿಸಿರುವ ನಮ್ಮ ಆತ್ಮೀಯ ಗೆಳೆಯನಿಗೆ ಭಗವಂತನು ಸೇವೆ ಮಾಡುವ ಶಕ್ತಿಯನ್ನು ತುಂಬಿ, ಇನ್ನೂ ಉನ್ನತ ಹುದ್ದೆಗಳನ್ನು ಅಲಂಕರಿಸಲೆಂದು ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ದಶರಥ ಜಾಧವ್, ಚಂದ್ರು ವಿ, ಎಮ್.ಸಿ ಪಾಟೀಲ, ಸೂಡಿ, ಜಗದೀಶ ಜಾಲಿ, ವಿಶ್ವನಾಥ ಹಬೀಬ, ಸಂಗಮೇಶ ಗದಗ, ಗೋಪಾಲ ಖಟವಟೆ, ಶೇಖರಗೌಡ ಜಕ್ಕನಗೌಡ್ರ, ಪ್ರಕಾಶ ಸಿದ್ಲಿಂಗ್, ಜಗದೀಶ ಹೆಬಸೂರ, ಸತೀಶ ಖಟವಟೆ, ಬನೇಶ ಕುಲಕರ್ಣಿ, ಮಂಜುನಾಥ ಶಿವನಗುತ್ತಿ, ಜುಪ್ತಿಮಠ, ವಿಶ್ವ ಕಲ್ಯಾಣ ಸಂಸ್ಥೆಯ ಅಧ್ಯಕ್ಷ ಮಂಜುನಾಥ ಹದ್ದಣ್ಣವರವರು ಉಪಸ್ಥಿತರಿದ್ದು ಶುಭ ಹಾರೈಸಿದರು.

> ಡಾ. ನೀಲಗುಂದ ಹಾಗೂ ಜಿಲ್ಲಾ ಹಿರಿಯ ಫಾರ್ಮಸಿ ಅಧಿಕಾರಿ ದತ್ತಾತ್ರೇಯ ತ್ರಿಮಲ್ಲೆಯವರು ಸನ್ಮಾನ ಸ್ವೀಕರಿಸಿ ಮಾತನಾಡಿ, ಈ ಸನ್ಮಾನ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದೆ. ನಮ್ಮ ಅಧಿಕಾರಾವಧಿಯಲ್ಲಿ ಆರೋಗ್ಯ ಹಾಗೂ ಇಲಾಖೆಯ ಯೋಜನೆಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪುವಂತೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತೇವೆ ಎಂದರು.



ಮುಳಗುಂದ ಪಟ್ಟಣ ಸಮೀಪದ ಸೋರಟೂರ ಗ್ರಾಮದ ಸಾರ್ವಜನಿಕರು ಐತಿಹಾಸಿಕ 'ಚಂದ್ರಯಾನ-3' ಯಶಸ್ವಿಯಾಗುತ್ತಿದ್ದಂತೆ, ಭಾರತದ ಧ್ವಜವನ್ನು ಹಾರಿಸಿ ಸಿಹಿ ಹಂಚಿ, ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು.



ಮುಂಡರಗಿ ಪಟ್ಟಣದ ಜಗದ್ಗುರು ಅನ್ನದಾನೀಶ್ವರ ಸಂಸ್ಥಾನ ಮಠಕ್ಕೆ ಸಚಿವ ಎಂ.ಬಿ ಪಾಟೀಲ, ರೋಣ ಮತಕ್ಷೇತ್ರದ ಶಾಸಕ ಜಿ.ಎಸ್ ಪಾಟೀಲ ಭೇಟಿ ನೀಡಿ, ನಾಡೋಜ ಡಾ.ಅನ್ನದಾನೀಶ್ವರ ಶಿವಯೋಗಿಗಳ ಆಶೀರ್ವಾದ ಪಡೆದರು.

### ಹೆಸರು ಬೆಳೆಗೆ ಬಂಗಾರದ ಬೆಲೆಯಿದ್ದರೂ ನಿರೀಕ್ಷಿತ ಇಳುವರಿಯಿಲ್ಲ

# ಹೆಸರು ಬೆಲೆ ಗಗನಕ್ಕೆ, ರೈತರ ಕನಸು ಪಾತಾಳಕ್ಕೆ

■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ರೈತರ ಮುಂಗಾರಿನ ವಾಣಿಜ್ಯ ಬೆಳೆ ಹೆಸರಿಗೆ ಬಂಗಾರದ ಬೆಲೆ ಬಂದಿದೆ. ಆದರೆ, ಮಳೆ ಕೊರತೆ, ರೋಗಬಾಧೆಯಿಂದ ಇಳುವರಿ ಸಂಪೂರ್ಣ ಕುಸಿತವಾಗಿದೆ. ಬೆಲೆ ಕಂಡು ರೈತರು ಮರುಗುವಂತಾಗಿದೆ. ಸದ್ಯ ಮುಕ್ತ ಮಾರುಕಟ್ಟೆಯಲ್ಲಿಯೇ 9ರಿಂದ 11 ಸಾವಿರ ರೂ. ದಾಖಲೆಯ ಬೆಲೆಯಿದ್ದರೂ ರೈತರು ಕೈ ಹಿಸುಕಿಕೊಳ್ಳುವಂತಾಗಿದೆ. ಲಕ್ಷ್ಮೇಶ್ವರ ಎಪಿಎಂಸಿಗೆ ಕಳೆದೊಂದು ವಾರದಿಂದ ಅಂದಾಜು 500 ಕ್ವಿಂಟಲ್ ಹೆಸರು ಆವಕವಾಗಿದ್ದು, ಅದರಲ್ಲಿ ಬಹುತೇಕ ಕುಂದಗೋಳ ತಾಲೂಕಿನ ರೈತರಿಂದಲೇ ಬಂದಿದೆ.

ಮುಂಗಾರು ಬಿತ್ತನೆಯ ಪೂರ್ವದಲ್ಲಿ ಕೇಂದ್ರ ಸರ್ಕಾರ ಪ್ರತಿ ಕ್ವಿಂಟಲ್ ಹೆಸರು ಬೆಳೆಗೆ 8558 ರೂ ಬೆಂಬಲ ಬೆಲೆ ಘೋಷಣೆ ಮಾಡಿತ್ತು. ಈ ಕಾರಣದಿಂದ ಪ್ರಸಕ್ತ ಮುಂಗಾರಿನಲ್ಲಿ ಕಪ್ಪು ಮಣ್ಣಿನ ಜಮೀನಿನ ರೈತರು ಹೆಚ್ಚಿನ ಕ್ಷೇತ್ರದಲ್ಲಿ ಹೆಸರು ಬಿತ್ತನೆಗೆ ಮುಂದಾಗಿದ್ದರು.



ಜೂನ್ ಮೊದಲ ವಾರದಲ್ಲಿ ಹೆಸರು ಬಿತ್ತನೆಯಾಗಬೇಕು. ಕೆಲ ರೈತರು ಮಳೆ ಬರುತ್ತದೆ ಎಂದು ಬಿತ್ತನೆಗೆ ಸಕಾಲವಾದ ಜೂನ್ ಮೊದಲ ವಾರದಲ್ಲಿ ಬಿತ್ತನೆ ಮಾಡಿದ್ದರು. ಜೂನ್ ತಿಂಗಳುದ್ದಕ್ಕೂ ಮಳೆಯೇ ಆಗಲಿಲ್ಲ. ಜುಲೈ ತಿಂಗಳಲ್ಲಾದ ಮಳೆಗೆ ಕೆಲ ರೈತರು ಧೈರ್ಯ ಮಾಡಿ ಬಿತ್ತನೆ ಮಾಡಿದ್ದರು. ತಾಲೂಕಿನಲ್ಲಿ 12 ಸಾವಿರ ಎಕರೆ ಪ್ರದೇಶದಲ್ಲಿ ಹೆಸರು ಬಿತ್ತನೆ ಕ್ಷೇತ್ರದ ಗುರಿ ಹೊಂದಲಾಗಿತ್ತು. ಆದರೆ ಬಿತ್ತನೆಯಾಗಿದ್ದು ಕೇವಲ 3 ಸಾವಿರ(ಶೇ.25) ಎಕರೆ ಮಾತ್ರ. ಲಕ್ಷ್ಮೇಶ್ವರ, ಶಿಗ್ಲಿ, ದೊಡ್ಡೂರ, ಸೂರಣಗಿ, ಬಾಲೆಹೊಸೂರ, ಅಕ್ಕಿಗುಂದ, ಬಡ್ನಿ, ಬಟ್ಟೂರ, ಹರದಗಟ್ಟಿ, ಅಡರಕಟ್ಟಿ, ಗೋಜನೂರ, ಯಳವತ್ತಿ, ಮಾಡಳ್ಳಿ ಹೆಸರು ಬಿತ್ತನೆಯ ಪ್ರಮುಖ ಕ್ಷೇತ್ರಗಳಾಗಿವೆ. ಬೆಂಬಲ ಬೆಲೆಗಿಂತಲೂ ಹೆಚ್ಚಿನ ಬೆಲೆ ಮಾರುಕಟ್ಟೆಯಲ್ಲಿದ್ದು ಇನ್ನೂ ಬೆಲೆ ಹೆಚ್ಚಲಿದೆ ಎಂಬ ಮಾಹಿತಿಯಿಂದ ರೈತರು 'ನಮ್ಮ ಹಣೆ ಬರಹವೇ ಇಷ್ಟು' ಎಂದುಕೊಳ್ಳುತ್ತಿದ್ದಾರೆ.

> ಹೆಸರು ಮುಂಗಾರಿನ ಮೊದಲ ಮತ್ತು ರೈತರ ನೆಚ್ಚಿನ ಬೆಳೆಯಾಗಿದೆ. ಶ್ರಾವಣಮಾಸ, ಗಣೇಶ ಚತುರ್ಥಿ ದೊಡ್ಡ ಹಬ್ಬದ ಸಂಭ್ರಮಕ್ಕೆ ಮತ್ತು ಕೃಷಿ ಖರ್ಚು-ವೆಚ್ಚ, ಹಿಂಗಾರಿನ ಕೃಷಿಗೆ ಹೆಸರು ಬೆಳೆಯೇ ಆಸರೆ. ಸಕಾಲಿಕ ಮಳೆಯಾಗಿದ್ದರೆ ಹೆಸರು ರೈತರ ಕೈ ಹಿಡಿಯುತ್ತಿತ್ತು. ಈಗ ಹೆಸರು ಬೆಳೆದರೂ ಇಳುವರಿ ಕುಂಠಿತವಾಗಿ, ರೈತರ ಬಾಳು ಹಸನಾಗದಂತಾಗಿದೆ. ಒಟ್ಟಿನಲ್ಲಿ ಇತ್ತೀಚಿನ ವರ್ಷಗಳಲ್ಲಿ ಕೃಷಿಗೆ ಪೂರಕ ವಾತಾವರಣ ಇಲ್ಲದಿರುವುದು ರೈತರು ಕೃಷಿಯಿಂದ ವಿಮುಖರಾಗುವಂತಾಗಿದೆ. ಆಳುವ ಸರ್ಕಾರಗಳು ರೈತರ ಕಷ್ಟಕ್ಕೆ ಸ್ಪಂದಿಸದಿದ್ದರೆ ಭವಿಷ್ಯ ಇನ್ನಷ್ಟು ಕಷ್ಟ.
>
> **– ಬಸವರಾಜ ಬೆಟಗೇರಿ, ವಿರೂಪಾಕ್ಷಪ್ಪ ಆದಿ, ರುದ್ರಪ್ಪ ಮೆಣಸಿನಕಾಯಿ.**
> ರೈತರು.

> ಮುಂಗಾರಿನ ವಿಳಂಬದಿಂದ ಹೆಸರು ಬಿತ್ತನೆ ಶೇ.70ರಷ್ಟು ಕಡಿಮೆಯಾಗಿದೆ. ಜೂನ್ ಮತ್ತು ಆಗಸ್ಟ್ ತಿಂಗಳಲ್ಲಿ ಮಳೆಯೇ ಇಲ್ಲದೆ, ತೇವಾಂಶದ ಕೊರತೆಯಿಂದ ಇಳುವರಿ ಕಡಿಮೆಯಾಗಿದೆ. ಉಳಿದೆಲ್ಲ ಮುಂಗಾರಿನ ಬೆಳೆಗಳು ಒಣಗುತ್ತಿವೆ. ಹವಾಮಾನ ಇಲಾಖೆ ಸದ್ಯಕ್ಕೆ ಮಳೆಯ ಅಭಾವವಿದೆ ಎಂದಿದೆ. ಮಳೆ ಕೊರತೆ-ಬೆಳೆಯ ಪರಿಸ್ಥಿತಿಯ ಬಗ್ಗೆ, ಬಿತ್ತನೆ ಕ್ಷೇತ್ರ, ಬೆಳೆವಿಮೆ ಪಾವತಿಸಿರುವ ಬಗ್ಗೆ ಸಂಪೂರ್ಣ ವರದಿಯನ್ನು ಇಲಾಖೆಯ ಹಿರಿಯ ಅಧಿಕಾರಿಗಳಿಗೆ ನೀಡಲಾಗಿದೆ.
>
> **– ಚಂದ್ರಶೇಖರ ನರಸಮ್ಮನವರ.**
> ಕೃಷಿ ಅಧಿಕಾರಿ.

ಜೂನ್ ಮೊದಲ ವಾರದಲ್ಲಿ ಬಿತ್ತನೆ ಮಾಡಿದ ಬೆಳೆ ಮಳೆಯಾಗದೇ ಅಲ್ಲಿಯೇ ಕಮರಿದೆ. ಜುಲೈನಲ್ಲಾದ ಮಳೆಗೆ ಬಿತ್ತನೆ ಮಾಡಿದ್ದರೂ ಬೆಳೆಗೆ ಸಕಾಲವಲ್ಲದ್ದರಿಂದ ರೋಗಭಾಧೆ ಆವರಿಸಿಕೊಂಡಿತು. ಹೂವು, ಹೀಚು ಬಿಟ್ಟ ಸಂದರ್ಭದಲ್ಲಿ ಮತ್ತೆ ಮಳೆ ಕೈಕೊಟ್ಟಿತು. ಕಾಳು ಮೂಡುವ ಹಂತದ ಆಗಸ್ಟ್‌ನಲ್ಲಿ ಹನಿ ಮಳೆಯೂ ಆಗಲಿಲ್ಲ. ಈ ನಡುವೆಯೂ ಬೀಜ, ಗೊಬ್ಬರ, ಕಳೆನಾಶಕ, ಕ್ರಿಮಿನಾಶಕ ಸಿಂಪಡಣೆ, ನಿರ್ವಹಣೆಗಾಗಿ ಪ್ರತಿ ಎಕರೆಗೆ ಕನಿಷ್ಠ 10 ಸಾವಿರ ರೂ ಖರ್ಚು ಮಾಡಿದ್ದಾರೆ. ಎಕರೆಗೆ ಸರಾಸರಿ 5 ಕ್ವಿಂಟಲ್ ಹೆಸರು ಬೆಳೆಯುವ ರೈತರು 2/3 ಕ್ವಿಂಟಲ್‌ಗೆ ತೃಪ್ತಿಪಟ್ಟುಕೊಳ್ಳುವಂತಾಗಿದೆ.

# ಬಸಯ್ಯ ಕೆ ಬೆಳ್ಳೇರಿಗೆ ಪಿಎಚ್‌ಡಿ ಪದವಿ

■ ವಿಜಯಸಾಕ್ಷಿ ಸುದ್ದಿ, ಗದಗ



ನಗರದ ತೋಂಟದಾರ್ಯ ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಬಸಯ್ಯ ಕೆ ಬೆಳ್ಳೇರಿ ಇವರು 'ಡೈನಾಮಿಕ್ ಅನಾಲಿಸಿಸ್ ಆಫ್ ಸಿಕ್ಸ್ ಬಾರ್ ಅಂಡ್ ಏಟ್ ಬಾರ್ ಪ್ಲೇನಾರ್ ಮೆಕ್ಯಾನಿಸಮ್ ವಿಥ್ ವೇರಿಯೇಬಲ್ ಟೊಪಾಲಜಿ' ವಿಷಯದಲ್ಲಿ ಮಂಡಿಸಿದ ಮಹಾಪ್ರಬಂಧಕ್ಕೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ಪಿಎಚ್‌ಡಿ ಪದವಿಯನ್ನು ನೀಡಿ ಗೌರವಿಸಿದೆ.

ಇವರಿಗೆ ಬಾಗಲಕೋಟೆ ಯ ಬಸವೇಶ್ವರ ಇಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಸಹಪ್ರಾಧ್ಯಾಪಕರಾದ ಡಾ.ಶ್ರವಣಕುಮಾರ ಬಿ ಕೆರೂರ್ ಮಾರ್ಗದರ್ಶನ ನೀಡಿದ್ದಾರೆ. ಇವರು ಮೂಲತಃ ಗದಗ ತಾಲೂಕಿನ ಕದಡಿ ಗ್ರಾಮದವರಾಗಿದ್ದು, ಇವರ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಶುಂಪಾಲರು, ಸಿಬ್ಬಂದಿ ವರ್ಗ ಮತ್ತು ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.



ಲಕ್ಷ್ಮೇಶ್ವರದಲ್ಲಿ ನಡೆದ ಪ್ರಸಕ್ತ ಸಾಲಿನ ತಾಲೂಕಾ ಮಟ್ಟದ ಪದವಿಪೂರ್ವ ಮಹಾವಿದ್ಯಾಲಯಗಳ ಕ್ರೀಡಾಕೂಟದಲ್ಲಿ ಎಸ್‌ಎಂಜೆವಿ ಸ್ವತಂತ್ರ ಪದವಿಪೂರ್ವ ಕಾಲೇಜಿನ ಬಾಲಕಿಯರ ವಿಭಾಗದಲ್ಲಿ ಕಬಡ್ಡಿ, ಥ್ರೋಬಾಲ್(ಪ್ರಥಮ) ಖೋ ಖೋ(ದ್ವಿತೀಯ) 400ಮೀ ರೀಲೇ(ದ್ವಿತೀಯ), ವೈಯಕ್ತಿಕ ವಿಭಾಗದಲ್ಲಿ ಗುಂಡು ಹಾಗೂ ಭಲ್ಲೆ ಎಸೆತ(ಪ್ರಥಮ), ಚಕ್ರ ಎಸೆತ(ದ್ವಿತೀಯ), ಉದ್ದ ಜಿಗಿತ(ತೃತೀಯ) 800ಮೀ ಓಟ ಪ್ರಥಮ ಹಾಗೂ ತೃತೀಯ ಸ್ಥಾನ, 3000ಮೀ ಪ್ರಥಮ ಮತ್ತು ದ್ವಿತೀಯ ಸ್ಥಾನ, ನಡಿಗೆಯಲ್ಲಿ ಪ್ರಥಮ ಸ್ಥಾನ ಗಳಿಸುವ ಮೂಲಕ ಜಿಲ್ಲಾಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

### ಹೊರಟ್ಟಿ ದಂಪತಿಗಳಿಂದ ಸರಕಾರಿ ಪ್ರೌಢಶಾಲೆಗೆ ವಿವಿಧ ಪರಿಕರಗಳ ವಿತರಣೆ ಕಾರ್ಯಕ್ರಮ ಇಂದು

# ಅವ್ವ ಟ್ರಸ್ಟ್ ಸಹಕಾರದಿಂದ ಕಳೆಗಟ್ಟಿದ ಪ್ರೌಢಶಾಲೆ

■ ವಿಜಯಸಾಕ್ಷಿ ಸುದ್ದಿ, ಗದಗ

ಬಸವರಾಜ ಹೊರಟ್ಟಿ ದಂಪತಿಗಳು ಗದುಗಿನ ಸಿದ್ಧಲಿಂಗ ನಗರದ ಸರಕಾರಿ ಪ್ರೌಢಶಾಲೆಯನ್ನು ದತ್ತು ಪಡೆದು ಈಗಾಗಲೇ ರಂಗಮಂದಿರ, ಗಣಿತ ಪ್ರಯೋಗಾಲಯ, ಶಾಲೆಯ ಕಾಂಪೌಂಡ್ ಎತ್ತರಿಸುವ ಕಾರ್ಯ, ಮೈದಾನಕ್ಕೆ ಪೇವರ್ಸ್ ಅಳವಡಿಕೆ, ವಿದ್ಯಾರ್ಥಿಗಳಿಗೆ ಬಿಸಿಯೂಟಕ್ಕಾಗಿ ಪ್ಲೇಟ್-ಗ್ಲಾಸು ಇತ್ಯಾದಿಗಳನ್ನು ಒದಗಿಸುವ ಮೂಲಕ ಇಡೀ ಶಾಲೆಯ ಕಳೆಯನ್ನೇ ಬದಲಾಯಿಸಿದ್ದಾರೆ. ಖಾಸಗಿ ಶಾಲೆಯಂತೆ ಕಂಗೊಳಿಸುವ ಈ ಸರ್ಕಾರಿ ಪ್ರೌಢಶಾಲೆಗೆ ಬಸವರಾಜ ಹೊರಟ್ಟಿ ದಂಪತಿಗಳ ಸಹಕಾರದಿಂದ ಕಳೆಗಟ್ಟುತ್ತಿದೆ.

ಈಗ ಅವ್ವ ಸೇವಾ ಟ್ರಸ್ಟ್, ಹುಬ್ಬಳ್ಳಿ ಸರಕಾರಿ ಪ್ರೌಢಶಾಲೆ ಸಿದ್ಧಲಿಂಗ ನಗರ, ಗದಗ ಹಾಗೂ ವೆರ್ಣೇಕರ್ ಪರಿವಾರ ಇವರ ಆಶ್ರಯದಲ್ಲಿ ದಿ. ಗಂಗಾಧರ ವಿಠೋಬಾ ವೆರ್ಣೇಕರ್ ಸ್ಮರಣಾರ್ಥ ವಿದ್ಯಾರ್ಥಿಗಳಿಗೆ ಹಾಗೂ ಶಾಲೆಗೆ ಉಪಯುಕ್ತವಾಗುವ ಪರಿಕರಗಳನ್ನು ಗುರುವಾರ ಬೆಳಿಗ್ಗೆ 10 ಗಂಟೆಗೆ ವಿತರಣೆ ಮಾಡಲಾಗುವುದು ಎಂದು ಆಯೋಜಕರಾದ ಡಾ.ಬಸವರಾಜ ಧಾರವಾಡ ತಿಳಿಸಿದ್ದಾರೆ.



> ಈ ಸಂದರ್ಭದಲ್ಲಿ ಸಾ.ಶಿ.ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ, ಅವ್ವ ಸೇವಾ ಟ್ರಸ್ಟ್ ಸಂಚಾಲಕ ಡಾ.ಬಸವರಾಜ ಧಾರವಾಡ, ಜಿ ಪಂ ಅಕ್ಷರ ದಾಸೋಹ ಶಿಕ್ಷಣಾಧಿಕಾರಿ ಸರಸ್ವತಿ ಡಿ.ಕನವಳ್ಳಿ, ಕ್ಷೇತ್ರ ಶಿಕ್ಷಣಾಧಿಕಾರಿ ಆರ್.ಎಸ್ ಬುರಡಿ, ಗದಗ-ಬೆಟಗೇರಿ ನಗರಸಭೆಯ ಸದಸ್ಯೆ ವಿದ್ಯಾ ಗಡಗಿ, ಶ್ರೀಮತಿ ಹೇಮಲತಾ ಬ. ಹೊರಟ್ಟಿ ಗಣೀತ ಪ್ರಯೋಗಾಲಯ ಹಾಗೂ ಸಂಶೋಧನಾ ಕೇಂದ್ರದ ಮಾರ್ಗದರ್ಶಕ ಅರುಣ ಕುಲಕರ್ಣಿ ಉಪಸ್ಥಿತರಿರುವರು.

ಈ ಸಂದರ್ಭದಲ್ಲಿ ಮ್ಹಾಳಸಾ ಜ್ಯುವೇಲರ್ ಮಾರ್ಟ್‌ನ ಸುನೀಲ ಗಂಗಾಧರ ವೆರ್ಣೇಕರ್ ಇವರನ್ನು ಸನ್ಮಾನಿಸಲಾಗುವುದು. ಈ ಕಾರ್ಯಕ್ರಮಕ್ಕೆ ರೇಣುಕಾ ರೋಣದ, ಎಸ್.ಎಂ ಅಗಡಿ, ಮುಖ್ಯೋಪಾಧ್ಯಾಯರಾದ ಪಾರ್ವತಿ ವಸ್ತ್ರದ, ಜಯಲಕ್ಷ್ಮೀ ಬಿ.ಅಣ್ಣಿಗೇರಿ, ಎಸ್.ಆರ್ ಹನಮಗೌಡ್ರ, ಎಸ್.ಜಿ ಕುಲಗುಡಿ, ಎಮ್.ಆಯ್ ಶಿವನಗೌಡ್ರ, ಎಂ.ಪಿ ಸಾಂಬ್ರಾಣಿ, ಎಸ್.ಬಿ ಗುಳೇದವರ, ಎಸ್.ಎಂ ಪತ್ತಾರ, ಎಸ್.ಎಸ್ ಗಾಳಿ, ಆರ್. ವಾಯ್ ಬಸರಿ, ಎಸ್.ಎ ಬಾಣದ, ಎಸ್.ಎ ಗದ್ದನಕೇರಿ, ಎನ್.ಆರ್ ಶಿರೋಳ, ಎಸ್.ಯು ಕುಷ್ಟಗಿ, ಜಿ.ಎನ್ ಅಳವಂಡಿ, ಪಿ.ವ್ಹಿ ದಾಸರ, ಪ್ರದಸ ಎಲ್.ಎಸ್ ಮಾಳೊತ್ತರ 'ಹಾಗೂ ವಿದ್ಯಾರ್ಥಿಗಳು ಸ್ವಾಗತ ಕೋರಿದ್ದಾರೆ.

# ಚಂದ್ರಯಾನ-3 ಯಶಸ್ವಿ: ತೋಂಟದ ಶ್ರೀಗಳ ಹರ್ಷ

■ ವಿಜಯಸಾಕ್ಷಿ ಸುದ್ದಿ, ಗದಗ

ಇಸ್ರೋ ವಿಜ್ಞಾನಿಗಳ ಪ್ರತಿಭೆ ಮತ್ತು ಪರಿಶ್ರಮದ ಫಲವಾಗಿ ಚಂದ್ರಯಾನ-3 ಯಶಸ್ವಿಯಾದುದಕ್ಕೆ ಡಂಬಳ-ಗದಗ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠದ ಡಾ. ತೋಂಟದ ಸಿದ್ಧರಾಮ ಮಹಾಸ್ವಾಮಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

ಚಂದ್ರನ ದಕ್ಷಿಣ ಧ್ರುವದಲ್ಲಿ ಪಾದಾರ್ಪಣೆ ಮಾಡಿದ ಜಗತ್ತಿನ ಪ್ರಪ್ರಥಮ ದೇಶ ನಮ್ಮದು.

ಅತ್ಯಂತ ಕುತೂಹಲದ ಈ ಕ್ಷಣಗಳನ್ನು ಅವಲೋಕಿಸಿದ ದೇಶದ 140 ಕೋಟಿ ಭಾರತೀಯರು ಸಂಭ್ರಮಿಸುತ್ತಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ನಮ್ಮ ವಿಜ್ಞಾನಿಗಳು ಸಾಧಿಸಿದ ಈ ಅಪೂರ್ವ



ಸಾಧನೆ ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡುವಂತಹದ್ದು.

ಇದು ಭವಿಷ್ಯದ ಅಭಿವೃದ್ಧಿ ಮತ್ತು ಸಾಧನೆಗೆ ದಿಕ್ಸೂಚಿಯಾಗಿದೆ ಎಂದು ಹೇಳಿದ ಶ್ರೀಗಳು ಇಸ್ರೋ ವಿಜ್ಞಾನಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದ್ದಾರೆ.

# ಸಾರ್ವಜನಿಕರ ಗಮನಕ್ಕೆ

■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯ ವಿವಿಧ ತಾಲೂಕಿನ ಮೀನುಗಾರಿಕೆ ಇಲಾಖೆ ಕೆರೆಗಳ ಮೀನು ಪಾಶುವಾರು ಹಕ್ಕನ್ನು ಮುಂದಿನ 5 ವರ್ಷಗಳ ಅವಧಿಗೆ ನಿಯಮಾನುಸಾರ ಟೆಂಡರ್ ಕಮ್ ಹರಾಜು ಮೂಲಕ ವಿಲೇವಾರಿ ಮಾಡಲು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸದ್ಯದಲ್ಲಿ ಪ್ರಕಟಣೆ ಹೊರಡಿಸಲಾಗುವುದು. ಆಸಕ್ತರು ಇ- ಪ್ರೊಕ್ಯೂರ್‌ಮೆಂಟ್ ತಂತ್ರಾಂಶ (2.0) ಆವೃತಿ ಸಂಬಂಧಿಸಿದಂತೆ ಟೆಂಡರ್ ಕಮ್ ಹರಾಜಿನಲ್ಲಿ ಭಾಗವಹಿಸಲು ಅವಶ್ಯವಿರುವ ಡಿಜಿಟಲ್ ಕೀ ಗಳನ್ನು ಮುಂಜಾಗ್ರತವಾಗಿ ತಯಾರಿಸಿಟ್ಟುಕೊಳ್ಳಬೇಕು.

ಹೆಚ್ಚಿನ ಮಾಹಿತಿಗಾಗಿ ಗದಗ, ರೋಣ, ನರಗುಂದ, ಗಜೇಂದ್ರಗಡ ತಾಲೂಕಿನ ಆಸಕ್ತರು ಮೀನುಗಾರಿಕೆ ಸಹಾಯಕ ನಿರ್ದೇಶಕರು ಗದಗ (ಮೊ. ಸಂ: 9880210505 ಅವರನ್ನು ಸಂಪರ್ಕಿಸಲು ಹಾಗೂ ಮುಂಡರಗಿ, ಶಿರಹಟ್ಟಿ ಮತ್ತು ಲಕ್ಷ್ಮೇಶ್ವರ ತಾಲೂಕಿನ ಆಸಕ್ತರು ಮೀನುಗಾರಿಕೆ ಸಹಾಯಕ ನಿರ್ದೇಶಕರು ಮುಂಡರಗಿ (ಮೊ. ಸಂ: 8095792530) ರವರನ್ನು ಸಂಪರ್ಕಿಸಬಹುದು ಎಂದು ಮೀನುಗಾರಿಕೆ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಧ್ಯಕ್ಷರಾಗಿ ವೀರಭದ್ರಪ್ಪ ಹರ್ತಿ ಆಯ್ಕೆ

■ ವಿಜಯಸಾಕ್ಷಿ ಸುದ್ದಿ, ಮುಳಗುಂದ

ಪಟ್ಟಣದ ನೀಲಕಂಠೇಶ್ವರ ಕೋ-ಆಪ್ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷರಾಗಿ ವೀರಭದ್ರಪ್ಪ ಹರ್ತಿ ಅವಿರೋಧವಾಗಿ ಆಯ್ಕೆಯಾದರು. ಉಪಾಧ್ಯಕ್ಷರಾಗಿ ಮಾಹಾರುದ್ರಪ್ಪ ಯಾವಗಲ್ಲ, ಸದಸ್ಯರಾಗಿ ಈರಪ್ಪ ಕೊಂಡಿಕೊಪ್ಪ, ಚಂದ್ರಶೇಖರಪ್ಪ ಹರ್ತಿ, ಚಂದ್ರಶೇಖರಪ್ಪ ಹಳ್ಳಿ, ಮಾಹಾಂತೇಶ ನೀರಜಿಡ್ಡಿ, ರಾಜು ಕೊಂಡಿಕೊಪ್ಪ, ಶಿವಾನಂದ ಹದ್ಲಿ, ಚನ್ನವ್ವ ಜಂತ್ಲಿ, ಮಂಗಳಾ ಹರ್ತಿ ಆಯ್ಕೆಯಾದರು.



ಗದಗ ಸಹಕಾರಿ ಸಂಘಗಳ ಉಪನಿಬಂಧಕರ ಕಛೇರಿಯ ಅಧೀಕ್ಷಕರಾದ ಶಾಂತಾ ಎಚ್.ಎಂ, ಮುಖ್ಯಕಾರ್ಯನಿರ್ವಾಹಕರಾದ ಶಿವಾನಂದ ಸವದತ್ತಿ, ಸಿಬ್ಬಂದಿ ಬಸವರಾಜ ನೀರಜಿಡ್ಡಿ ಇದ್ದರು.

### ಹುಲಕೋಟಿ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟ

# ಮನೋಹರ ಅಮರಪ್ಪ ಇನಾಮತಿ ಪ್ರೌಢಶಾಲೆಗೆ ಸಮಗ್ರ ಪ್ರಶಸ್ತಿ

■ ವಿಜಯಸಾಕ್ಷಿ ಸುದ್ದಿ, ಗದಗ

ಹುಲಕೋಟಿ ವಲಯ ಮಟ್ಟದ ಪ್ರೌಢಶಾಲೆಗಳ ಕ್ರೀಡಾಕೂಟವು ಅಸುಂಡಿಯ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆ ಅಸುಂಡಿಯಲ್ಲಿ ಜರುಗಿತು. ಇದರಲ್ಲಿ ಕುರ್ತಕೋಟಿ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಮನೋಹರ ಅಮರಪ್ಪ ಇನಾಮತಿ ಪ್ರೌಢಶಾಲೆಯ ಮಕ್ಕಳು ಭಾಗವಹಿಸಿ ಬಾಲಕ ಮತ್ತು ಬಾಲಕಿಯರ ವಿಭಾಗದಲ್ಲಿ ವೀರಾಗ್ರಣಿ ಪ್ರಶಸ್ತಿ ಪಡೆದು ತಾಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.




ಬಾಲಕರ ವೈಯಕ್ತಿಕ ವಿಭಾಗ: ಮಕ್ತುಮ ದೊಡ್ಡಮನಿ 400ಮೀ, 800ಮೀ, ಗುಂಡು ಎಸೆತದಲ್ಲಿ ಪ್ರಥಮ, ಸಂತೋಷ ಪೂಜಾರ-800ಮೀ ದ್ವಿತೀಯ, ಭಲ್ಲೆ ಎಸೆ-ಪ್ರಥಮ, ವಿಜಯ ಹರ್ತಿ-1500ಮೀ ದ್ವಿತೀಯ, ನಿಯಾಜ ಕೊಪ್ಪತ-1500ಮೀ ತೃತೀಯ, ತೇಜಸ್ ಆಡ್ರಕಟ್ಟಿ-3000ಮೀ ದ್ವಿತೀಯ, ದರ್ಶನ ಈಳಗೇರ-3000ಮೀ ತೃತೀಯ, ಶಶಾಂಕ ಕಪ್ಪರಶೆಟ್ಟಿ-5000ಮೀ ನಡಿಗೆ ದ್ವಿತೀಯ, ಅಕ್ಬರ್‌ಬಾಷಾ ನದಾಫ-ಅಡೆತಡೆ ಓಟ ದ್ವಿತೀಯ, ಭೀರಪ್ಪ ಪೂಜಾರ-ಚಕ್ರ ಎಸೆತ ದ್ವಿತೀಯ, ಸರಪಳಿ ಗುಂಡು ಪ್ರಥಮ, ವಿನಾಯಕ ಗಡ್ಡದ-ಭಲ್ಲೆ ಎಸೆತ ತೃತೀಯ, ರಮೇಶ ಕೊರವರ-ಸರಪಳಿ ಗುಂಡು ಎಸೆತ ದ್ವಿತೀಯ, ವಿಶ್ವನಾಥ ಇಸರಿ-ತ್ರಿವಿಧ ಜಿಗಿತ ದ್ವಿತೀಯ. ಬಾಲಕರ ಗುಂಪು ಆಟದಲ್ಲಿ: ವಾಲಿಬಾಲ್ ಪ್ರಥಮ, ಥ್ರೋಬಾಲ್ ಪ್ರಥಮ, 4*100 ರಿಲೇ ದ್ವಿತೀಯ.

ಬಾಲಕಿಯರ ವೈಯಕ್ತಿಕ ವಿಭಾಗ: ನೇತ್ರಾ ಲಾಲಪಡಿ-100ಮೀ ದ್ವಿತೀಯ, ಅನಿತಾ ಸೋಮಣ್ಣವರ-200ಮೀ, ಅಡೆತಡೆ ಓಟ, ಉದ್ದಜಿಗಿತ ಪ್ರಥಮ, ಫಾತಿಮಾ ದೊಡ್ಡಮನಿ-400ಮೀ ದ್ವಿತೀಯ, ಚೇತನಾ ಈರಗಾರ-1500ಮೀ ದ್ವಿತೀಯ, ರೇಣುಕಾ ಈರಗಾರ-1500ಮೀ ತೃತೀಯ, ಲಕ್ಷ್ಮೀ ಮಲ್ಲಸಮುದ್ರ-3000ಮೀ ತೃತೀಯ, ಕವಿತಾ ಬಿಸೇಬೂದಿ-5000ಮೀ ದ್ವಿತೀಯ, ಜ್ಯೋತಿ ಮಳ್ಳಿ-ಚಕ್ರ ಎಸೆತ ತೃತೀಯ, ಲಕ್ಷ್ಮೀ ಗೌಡನಾಯ್ಕರ-ಭಲ್ಲೆ ಎಸೆತ, ತ್ರಿವಿಧ ಜಿಗಿತ ಪ್ರಥಮ, ವರ್ಷಾ ದೊಡ್ಡಮನಿ-ಸರಪಳಿ ಗುಂಡು ಎಸೆತ ತೃತೀಯ, ರಕ್ಷಿತಾ ಹಿಟಬುತ್ತಿ-ಉದ್ದ ಜಿಗಿತ ತೃತೀಯ, ಪೂರ್ಣಿಮಾ ಬಿಸೇಬೂದಿ-ಎತ್ತರ ಜಿಗಿತ, ತ್ರಿವಿಧ ಜಗಿತ ದ್ವಿತೀಯ. ಬಾಲಕಿಯರ ಗುಂಪು ಆಟದಲ್ಲಿ: ಕಬಡ್ಡಿ ದ್ವಿತೀಯ, ಖೋ-ಖೋ ದ್ವಿತೀಯ, ಥ್ರೋಬಾಲ್ ಪ್ರಥಮ. ಬಾಲಕರ ವೀರಾಗ್ರಣಿ ಪ್ರಶಸ್ತಿ-ಮಕ್ತುಮ ದೊಡ್ಡಮನಿ, ಬಾಲಕಿಯರ ವೀರಾಗ್ರಣಿ-ಅನಿತಾ ಸೋಮಣ್ಣವರ ಪಡೆದುಕೊಂಡರು.

ಸಾಧನೆಗೈದ ಕ್ರೀಡಾಪಟುಗಳಿಗೆ ಹಾಗೂ ಮಾರ್ಗದರ್ಶನ ನೀಡಿದ ದೈಹಿಕ ಶಿಕ್ಷಕ ಎಂ.ಎಚ್ ಅಂಗಡಿಯವರಿಗೆ ಸಂಸ್ಥೆಯ ಅಧ್ಯಕ್ಷ ಆರ್.ಎಂ ಮೂಲಿಮನಿ, ಆಡಳಿತಾಧಿಕಾರಿ ಎಸ್. ಆರ್ ಪಾಟೀಲ, ಸ್ಥಾನಿಕ ಆಡಳಿತ ಮಂಡಳಿ ಅಧ್ಯಕ್ಷ ಯು.ವಿ ಬೆಟಗೇರಿ, ಸದಸ್ಯ ಅಪ್ಪಣ್ಣ ಇನಾಮತಿ, ಸರ್ವ ಸದಸ್ಯರು, ಮುಖ್ಯೋಪಾಧ್ಯಾಯ ಜಂಬುನಾಥ ಹರಿವಾಣ, ಶಿಕ್ಷಕರು, ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

ಭಾರತೀಯ ಬಾಹ್ಯಾಕಶ ಸಂಶೋಧನಾ ಸಂಸ್ಥೆ(ಇಸ್ರೋ)ಯು ಚಂದ್ರಯಾನ-3 ಯೋಜನೆಯ ಲ್ಯಾಂಡರ್ 'ವಿಕ್ರಮ್' ಚಂದ್ರನನ್ನು ಸ್ಪರ್ಶಿಸುವ ಕೆಲವೇ ನಿಮಿಷಗಳ ಮುನ್ನ ತೆಗೆದ ಚಿತ್ರವನ್ನು ಬಿಡುಗಡೆ ಮಾಡಿದೆ. ಚಂದ್ರಯಾನ-3ರ ಲ್ಯಾಂಡರ್‌ನ ಹಾರಿಜಾಂಟಲ್ ವೆಲಾಸಿಟಿ ಕ್ಯಾಮರಾದಿಂದ ಚಂದ್ರನನ್ನು ಸ್ಪರ್ಶಿಸುವ ಸಂದರ್ಭದಲ್ಲಿ ಸೆರೆಹಿಡಿದ ಚಿತ್ರ ಇದಾಗಿದೆ.



# ಚಂದ್ರಯಾನ-3 ಯಶಸ್ವಿ: ಶ್ರೀ ರಂಭಾಪುರಿ ಜಗದ್ಗುರುಗಳ ಹರ್ಷ

■ ವಿಜಯಸಾಕ್ಷಿ ಸುದ್ದಿ, ಬಾಳೆಹೊನ್ನೂರು

ಇಸ್ರೋದ ಚಂದ್ರಯಾನ-3ರ ವಿಕ್ರಮ್ ಲ್ಯಾಂಡರ್ ಚಂದ್ರನ ಅಂಗಳದಲ್ಲಿ ಯಶಸ್ವಿಯಾಗಿ ಪಾದಾರ್ಪಣೆ ಮಾಡಿದ್ದನ್ನು ಕಂಡು ತಮಗೆ ಹೃದಯ ತುಂಬಿ ಬಂದಿದೆ ಎಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಸಂತಸವನ್ನು ಹಂಚಿಕೊಂಡಿದ್ದಾರೆ.

ಭಾರತೀಯ ವಿಜ್ಞಾನಿಗಳ ಶ್ರಮದ ಐತಿಹಾಸಿಕ ಸಾಧನೆ ಇಡೀ ವಿಶ್ವವೇ ಹೆಮ್ಮೆಪಡುವಂತಾಗಿದೆ.



ಈಗಾಗಲೇ ಹಲವಾರು ದೇಶಗಳು ಚಂದಿರನ ವಿವಿಧ ಪ್ರದೇಶಗಳಲ್ಲಿ ಪಾದಾರ್ಪಣೆ ಮಾಡಿವೆ. ಆದರೆ ಚಂದಿರನ ದಕ್ಷಿಣ ಧ್ರುವದಲ್ಲಿ ಪ್ರಪ್ರಥಮ ಹೆಜ್ಜೆ ಇಟ್ಟ ಕೀರ್ತಿ ಭಾರತದ್ದಾಗಿದೆ. ಇಸ್ರೋದ ಮುಖ್ಯಸ್ಥರನ್ನೊಳಗೊಂಡು ಸಮಸ್ತ ವಿಜ್ಞಾನಿಗಳಿಗೆ ತಮ್ಮ ಶುಭ ಹಾರೈಕೆಗಳನ್ನು ನೀಡುವುದಾಗಿ ಅವರು ತಿಳಿಸಿದ್ದಾರೆ. ವಿಜ್ಞಾನಿಗಳ ಪರಿಶ್ರಮಕ್ಕೆ ಬೆನ್ನೆಲುಬಾಗಿ ನಿಂತ ದೇಶದ ಪ್ರಧಾನಿ ನರೇಂದ್ರ ಮೋದಿಯವರಿಗೂ ಶ್ರೀಗಳು ಅಭಿನಂದನೆಗಳನ್ನು ತಿಳಿಸಿದ್ದಾರೆ. ನಮ್ಮ ವಿಜ್ಞಾನಿಗಳ ಸಾಧನೆಯನ್ನು ಎಷ್ಟು ಹೊಗಳಿದರೂ ಕಡಿಮೆಯಾಗಿದೆ. ಇಂತಹ ಸಾಧನೆಗಳು ಇಸ್ರೋ ವಿಜ್ಞಾನಿಗಳಿಂದ ಇನ್ನೂ ಹೆಚ್ಚು ಹೆಚ್ಚಾಗಿ ನಡೆಯಲೆಂದು ಅವರು ಶುಭ ಹಾರೈಸಿದ್ದಾರೆ.

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka